Mr. SPEAKER.—Now consideration of Bills. Or, shall we take up the official resolutions ?

Sri K. HANUMANTHAIYA (Leader of the House).—Bills may be taken up now.

Mr. SPEAKER.—General debate will continue on the Mysore (Religious and Charitable) Inams Abolition Bill. Sri S. Gopala Gowda was speaking yesterday and he will resume his speech.

MYSORE (RELIGIOUS AND CHARITABLE) INAMS ABOLITION BILL, 1954.

Motion to consider (contd.)

* ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಈ ದೇವಾದಾಯ ಮತ್ತು ಧರ್ಮಾದಾಯ ಇನಾಂಗಳನ್ನು ರದ್ದುಮಾಡುವ ಮಸೂದೆಯ ಬಗ್ಗೆ ನಿನ್ನೆ ಮಾತನಾಡುತ್ತಾ, ನಾನು ಸಂಕ್ಷೇಪವಾಗಿ ಈ ಇನಾಂಗಳ ಇತಿಹಾಸ ಮತ್ತು ಇವುಗಳನ್ನು ತೊಡೆದು ಹಾಕಲು ಸಂಸ್ಥಾನದಲ್ಲಿ ಮಾಡಿರತಕ್ಕಂಥ ಸಂಪ್ರದಾಯಗಳನ್ನು ಸ್ಥೂಲವಾಗಿ ವಿವರಿಸಿ, ಈ ಇನಾಂ, ಜೋಡಿ, ಇವುಗಳ ರದ್ದಿಯಾತಿಯಿಂದ ಯಾವ ಧರ್ಮಕ್ಕೂ ಚ್ಯುತಿ ಬಂದಿಲ್ಲ ಎಂಬ ವಿಷಯವನ್ನು ಪ್ರಸ್ತಾಪಿಸಿದೆ. ಈಗ ಮುಂದುವರಿದು ಈ ಮಸೂದೆಯ ಅಗತ್ಯದ ಬಗ್ಗೆ ಒಂದೆರಡುಮಾತುಗಳನ್ನು ಹೇಳಬೇಕಾಗಿದೆ. ಈ ಜೋಡಿ, ಇನಾಂ ಪದ್ಧತಿಗಳು ಆಗಿ ಹೋಗಿರತಕ್ಕಂಥ ಹಳೆಯ ಕಾಲದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ರೀತಿನೀತಿಗಳನ್ನು ಪ್ರತಿಬಿಂಬಿಸತಕ್ಕವಾಗಿವೆ. ಆರ್ಥಿಕ ದೃಷ್ಟಿಯಿಂದ ನೋಡಿದರೆ ಇವು feudalistic ಪದ್ಧತಿಗೆ ಅನುಸಾರವಾಗಿವೆ. ಇವೊತ್ತು ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಂಡನಂತರದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕಾಗಿದೆ. ಈ ದಿಕ್ಕಿನಲ್ಲಿ ಅನೇಕ ಕ್ರಾಂತಿಕಾರಕ ಬದಲಾವಣೆಗಳು ನಡೆಯಬೇಕಾಗಿವೆ. ಈ ನಿಂದರ್ಭದಲ್ಲಿ ಸಾಮಾನ್ಯವಾಗಿ vested interest ಗಳು ಪರಿವರ್ತನೆಯಾಗುತ್ತವೆಯೆಂಬುದು ಗೊತ್ತಿದ್ದರೂ ಆ ಬದಲಾಣೆಗೆ ವಿರುದ್ಧವಾಗಿ ತಮ್ಮ ಎಲ್ಲ ಶಕ್ತಿಯನ್ನೂ ಸಂಗ್ರಹಿಸಿ ಹೋರಾಡತಕ್ಕದ್ದು ಸಹಜವಾಗಿದೆ.

ಇದೇ ರೀತಿ ಇಂದು ನಮ್ಮ ದೇಶದಲ್ಲಿರತಕ್ಕಂಥ ಬಂಡವಾಳಶಾಹಿಯ ಆರ್ಥಿಕ ಪದ್ಧತಿಯನ್ನು ಬದಲಾಯಿಸುವುದಕ್ಕೆ ಹೋದಾಗ, ಈ ಪದ್ಧತಿ ಇಂತಹ ಒಂದು ಬದಲಾವಣೆಯನ್ನು ತೀವ್ರವಾಗಿ ಪ್ರತಿಭಟಿಸುತ್ತದೆ. ಇದು ಅಶ್ಚರ್ಯವಾದ ವಿಷಯವೇನೂ ಅಲ್ಲ. ಇದೇ ರೀತಿ ನಾವು ನೂತನ ಯುಗದ ಆರಂಭದಲ್ಲದ್ದೇವೆಂದು ತಿಳಿದುಕೊಂಡಿದ್ದರೂ ಸಹ ನೂತನ ಯುಗಕ್ಕೆ ಎಲ್ಲರ ಸ್ವಾಗತವೂ ಇದೆ ಎಂದು ಭಾವಿಸುವುದಕ್ಕಾಗುವುದಿಲ್ಲ. ಎಷ್ಟೋ ಜನರು ಹಳೆಯ ಪದ್ಧತಿಗೆ ಅಂಟಿಕೊಂಡಿರತಕ್ಕಂಥವರು, ಹಳೆಯ ಪದ್ಧತಿಯ ಪೋಷಣೆಯಲ್ಲಿಯೇ ಬೆಳೆದುಕೊಂಡು ಬಂದಿರತಕ್ಕಂಥವರು ಸಾಮಾನ್ಯವಾಗಿ ಈ ಬದಲಾವಣೆಯನ್ನು ವಿರೋಧಿಸುವುದು ಸಹಜವಾಗಿದೆ. ಆದುದರಿಂದಲೇ ನಾವು ಈದಿನ ಈ ಮಾನ್ಯ ಸಭೆಯ ಒಳಗಡೆ ಮತ್ತು ಹೊರಗಡೆ, ದೇಶದಲ್ಲಿ ಈ ಪದ್ಧತಿ ಹೋದರೆ ಇದರಿಂದ ಹಾನಿ ಇದೆ ಎಂದು ಹೇಳುವ ಎಚ್ಚರಿಕೆ ಮಾತು ಕೇಳಿ ಬರುತ್ತಿದೆ; ಆದರೆ ಇಲ್ಲಿ ನಿಜವಾಗಿಯೂ ಕೆಲವು ಮೂಲಭೂತ ವಿಷಯಗಳನ್ನು ನಾವು ಚರ್ಚೆಮಾಡಿ ಮುಂದುವರಿಯುವುದೇ ಒಳ್ಳಿತು ಎಂದು ನನಗೆನ್ನಿಸುತ್ತದೆ. ಯಾವಾಗಲೂ ಜ್ಞಾನಿಗಳೊಬ್ಬರು ಹೇಳಿರುವ ಹಾಗೆ "Old order changeth yielding place to new" ಹಳೆಯ ಪದ್ಧತಿ ಹೊಸ ಪದ್ಧತಿಗೆ ಅವಕಾಶ ಮಾಡಿಕೊಟ್ಟು ತಾನೇ ಬದಲಾವಣೆ ಹೊಂದುತ್ತದೆ. ಹಾಗೆ ಇಂದು ನಾವು ಒಂದು ಪರ್ವಕಾಲದಲ್ಲಿದ್ದೇವೆ. ಹಳತು ಹೊಸತನದ ರೂಪವನ್ನು, ಪರಿವರ್ತನೆಯನ್ನು ಪಡೆಯಬೇಕಾಗಿದೆ. ನಾವು ನಮ್ಮ ದೃಷ್ಟಿಕೋಣವನ್ನು ಯುಗದ ಕೂಗಿಗೆ, ಯುಗದ ಬದಲಾವಣೆಗೆ ಹೊಂದಿಸಿಕೊಳ್ಳದೆ ಹೋದರೆ, ನಮ್ಮ ಮನೋಭಾವವನ್ನು ಬದಲಾಯಿಸಿಕೊಳ್ಳದೆ ಹೋದರೆ ಆಗ ಆ ಬದಲಾವಣೆ ಅಷ್ಟು ಸುಖಮಯವಾಗಿ ಆಗಲಾರದು. ಇದಕ್ಕೆ ನಾನು ಉದಾಹರಣೆ ಕೊಡಬೇಕೆಂದರೆ, ಸಾಮಾನ್ಯ ರೀತಿಯ ಹೆರಿಗೆ ಆಗುವುದಿಲ್ಲ, ಶಸ್ತ್ರಚಿಕಿತ್ಸೆಯಿಂದ ಮಾಡಿಸಿದ ಹೆರಿಗೆಯಂತಾಗುತ್ತದೆ.

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ಈ ವಿಚಾರದಲ್ಲಿ ನಿಮಗೆ ನಾಕಾದಷ್ಟು ಅನುಭವವಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅದೇನಿಲ್ಲ; ನಿಮಗೂ ನೇರವಾದ ಅನುಭವವಿಲ್ಲ. ಇದನ್ನೇ ನಾವು ಕ್ರಾಂತಿ ಎನ್ನುವುದು. ಮೊದಲು ಮಾನಸಿಕ ಕ್ರಾಂತಿ ಆಗಿ, ಪರಸ್ಪರ ವಿಮರ್ಶೆಯಿಂದ ಬದಲಾವಣೆ ಆಗಬೇಕು. ಆರೀತಿ ಆದರೆ ಶಾಂತಿಯುತವಾದ ಕ್ರಾಂತಿ ಆಗುತ್ತದೆ. "ಕ್ರಾಂತಿ" ಎಂಬ ಶಬ್ದ ಇರತಕ್ಕ ಕಡೆ ರಕ್ತ ಹರಿಯಬೇಕೆಂಬುದು ಒಂದು ಶಾಶ್ವತ ನಿಯಮವಲ್ಲ. ಕ್ರಾಂತಿಯನ್ನು ನಾವು ದಿನನಿತ್ಯದಲ್ಲಿ ಕಾಣುತ್ತೇವೆ. ಹೀಗೆಯೇ ಪ್ರತಿಭಾವವೂ, ಪ್ರತಿ ವ್ಯವಸ್ಥೆಯೂ ಕಾಲಕಾಲಕ್ಕೆ ಪರಿವರ್ತನೆಗೆ ಒಳಗಾಗಿದೆ. ಅಂದಮೇಲೆ ಇಂಥ ಪರಿವರ್ತನೆಯನ್ನು ಇಂಥ ವಿಕಾಸವನ್ನು ನಾವು ತಡೆಗಟ್ಟುವುದಕ್ಕೆ ಸಮರ್ಥರಾಗುವುದಿಲ್ಲ. ಒಂದುವೇಳೆ ತಡೆಗಟ್ಟಲು ಹೋದರೆ ಅವರು ಆ ಕಾರ್ಯದಲ್ಲಿ ವಿಫಲರಾಗುತ್ತಾರೆ. ಇಂಥ ಒಂದು ಯುಗದ ಬದಲಾವಣೆಯನ್ನು ಯಾರೂ ತಡೆಗಟ್ಟಲು ಶಕ್ಯವಿಲ್ಲ. ಹಾಗೆ ತಡೆಯುವುದಕ್ಕೆ ಹೋದರೆ ಘರ್ಷಣೆ ಹೆಚ್ಚಾಗಿ, ಉತ್ಕ್ರಾಂತಿ ಆಗಬಹುದು, ರಕ್ತದ ಕ್ರಾಂತಿ ಆಗಬಹುದು. ಈಗಲೂ ಸಹ ನಾವು ಧರ್ಮದ ವಿಷಯದಲ್ಲಿ ನೋಡಿದರೂ ಕೂಡ ಇವೊತ್ತು ನನಗೆ ಅರ್ಥವಾಗಿರುವ ಹಾಗೆ ಅನೇಕ ಧರ್ಮಗಳು ಕಲುಷಿತವಾಗಬಹುದು ಎಂದು ಹೇಳಬಹುದು. ಕಾರಣವೇನೆಂದು ನೋಡಿದರೆ, ಧರ್ಮ ಯಾವತ್ತೂ ಒಂದೇ ಆಗಿರುತ್ತದೆ.

ಧರ್ಮ, ಅದು ಸರ್ವಕಾಲಕ್ಕೂ ಉಳಿಯತಕ್ಕದ್ದು. ಆದರೆ ಮನುಷ್ಯ ತನ್ನ ಆಚರಣೆಯಲ್ಲಿ ಯಥಾನುಶಕ್ತಿ ಆಚರಿಸುತ್ತೇನೆ ಎಂದು ಹೇಳಿ ಕ್ರಮ ಕ್ರಮವಾಗಿ ಅದರ ಕಷ್ಟವಾದ ಭಾಗಗಳನ್ನು ಬಿಡುತ್ತಾ ಬರುತ್ತಾನೆ. ಅದು ಅಷ್ಟರಮಟ್ಟಿಗೆ ಕಲುಷಿತವಾಗುತ್ತದೆ. ಯಾವತ್ತು ನಮ್ಮ ಆಚಾರದಲ್ಲಿ ಪ್ರತಿನಿತ್ಯದ ಆಚಾರದಲ್ಲಿ ವಿಚಾರ ಶೂನ್ಯವಾಗುತ್ತಾ ಹೋಗುತ್ತದೆಯೋ ಅಂದಿಗೆ ಆ ಆಚಾರ ಗೊಡ್ಡು ಆಚಾರವಾಗುತ್ತದೆ. ಅದರ ಹಿಂದೆ ಇರತಕ್ಕ ಭಾವ ಮೂಢಭಾವನೆಯಾಗುತ್ತದೆ. ಹೀಗೆ ನಾವು ಅನೇಕ ವರ್ಷಗಳಿಂದ ಧರ್ಮದ ಆಚರಣೆಯಲ್ಲ

ಅನೇಕ ಮುಖ್ಯವಾದ ಅಂಶಗಳನ್ನು ಕೈಬಿಡುತ್ತಾ ಬಂದು ಇವೊತ್ತು ನಮ್ಮ ಆಚಾರದಲ್ಲಿ ಒಂದು ಶುಷ್ಕತೆ, ತಿರುಳಿಲ್ಲದಿರುವಿಕೆ ಮತ್ತು ಮೌಢ್ಯದಿಂದ ತುಂಬಿರುವ ಭಾವಾರ್ಥವನ್ನು ಇಟ್ಟುಕೊಂಡಿರುವುದನ್ನು ನಾವು ನೋಡುತ್ತಾ ಇದ್ದೇವೆ. ವಿಚಾರರಹಿತವಾದ ಆಚಾರವನ್ನು ಇವೊತ್ತು ನಾವು ಅನುಕರಿಸುತ್ತಾ ಇದ್ದೇವೆ, ನಡವಳಿಕೆಯಲ್ಲಿ ಇಟ್ಟುಕೊಂಡು ಇದ್ದೇವೆ. ಒಂದು ಉದಾಹರಣೆ ಕೊಡುವುದಾದರೆ, ಈ ಶ್ಯಂಗೇರಿಯ ಉದಾಹರಣೆಯನ್ನೇ ಕೊಡುತ್ತೇನೆ. ಶ್ರೀಮಾನ್ ಹನುಮಂತಯ್ಯನವರು ಮಾತನಾಡುತ್ತಾ ಮೊನ್ನೆ ಒಂದು ನಂದರ್ಭದಲ್ಲಿ ಉಡುಪಿಯ ಉದಾಹರಣೆ, ಮೇಲುಕೋಟೆಯ ಉದಾಹರಣೆ ಹೇಳಿದರು. ಹಿಂದೂಧರ್ಮದಲ್ಲಿ "ಸರ್ವೇಜನಾಃ ಸುಖಿನೋಭವಂತು" ಎಂದು ಹೇಳಿ ಎಲ್ಲರೂ ಸುಖವಾಗಿರಬೇಕು, ಅದು ಉದಾತ್ತವಾದ ತತ್ವ ಎಂಬ ಒಂದು ವಾಕ್ಯದ ಮೇಲೆ ನಾವು ಸಾಮಾನ್ಯವಾಗಿ ನಮ್ಮ ನಂಸ್ಕೃತಿಯನ್ನು ಜಗತ್ತಿನಲ್ಲಿ ಎತ್ತಿ ಹಿಡಿಯತಕ್ಕದ್ದೇನಿದೆಯೋ, ಪರಮತಸಹಿಷ್ಣುತೆ ಮತ್ತು ಎಲ್ಲಾ ವ್ಯಕ್ತಿಗಳನ್ನೂ ಸಮಾನತೆಯಿಂದ ಕಾಣುತ್ತೇವೆ ಎಂಬ ವಾದ, ಮಾತು, ಏನಿದೆಯೋ ಅದು ಆಚರಣೆಯಲ್ಲಿಲ್ಲದೆ, ಒಂದು ವಿಚಾರರಹಿತವಾದ ಆಚರಣೆ, ಗೊಡ್ಡು ಆಚಾರ ನಮ್ಮಲ್ಲಿ ಬಂದಿದೆ. ಆದ್ದರಿಂದಲೇ ಇಂದು ಈ ಧರ್ಮ ಕಲುಷಿತವಾಗಿದೆ ಎಂದು ಹೇಳುತ್ತೇವೆ. ಅದಕ್ಕೆ ನಾನು ಉದಾಹರಣೆ ಕೊಡಬೇಕಾದರೆ ನಾವು ಮೊದಲು ತತ್ವಕ್ಕೆ ಮಾರುಹೋಗುತ್ತೇವೆ, ಆಮೇಲೆ ತತ್ವವನ್ನು ಹೇಳಿದ ವ್ಯಕ್ತಿಗೆ ಮಾರುಹೋಗುತ್ತೇವೆ, ಅನಂತರದಲ್ಲಿ ತತ್ವ ಮತ್ತು ವ್ಯಕ್ತಿ ಇಬ್ಬರನ್ನೂ ಬಿಟ್ಟು ಸಂಸಾರದ ಉನ್ನತಿಗೆ ಮಾರುಹೋಗುತ್ತೇವೆ. ಹಾಗೆಯೇ ಇವೊತ್ತು ನಾವು ಈ ಗುರುಪೀಠಗಳು, ಮಠಗಳು, ಧಾರ್ಮಿಕ ನಂಸ್ಥೆಗಳು ಧರ್ಮದರ್ಶಿಗಳು ಇವುಗಳನ್ನು ನೋಡಿದರೆ, ವಿಚಾರ ಮಾಡಿದರೆ ಒಟ್ಟಿನಲ್ಲಿ ಅವರು ಏನಾಗಿದ್ದಾರೆ? ಆ ಪೀಠಗಳು ಏನಾಗಿವೆ?

Sri A. BHEEMAPPA NAIK (Molakalmuru).—Sir, I want to raise to a point of order. While we are entitled to speak on the Bill itself, it would not be appropriate for us to comment or make observations on the Mutts. It is not the Mutts that have come in the way. It is some of the Members who are in the way. Making reflections on their conduct would not be correct. Whether inams should be retained or abrogated or abolished is all the question. I would request the Speaker to kindly control the Member as regards points which are extraneous to this Inam Bill.

Sri Mulka GOVINDA REDDY (Chitaldrug).—It is necessary that we should speak in a comprehensive way, Sir.

Mr. SPEAKER.—I am very attentive and think that he is making out a case in his own way.

ಶ್ರೀ ಎಸ್. ಗೋಪಾಲಗೌಡ.—ಆದ್ದರಿಂದ ಇವೊತ್ತು ನಾವು ವಿಚಾರಮಾಡಿ ನೋಡಿದರೆ ತತ್ವದ ಬಗ್ಗೆ ನಾವು ಅಷ್ಟೇ ಆಗ್ರಹವನ್ನು ಇವೊತ್ತು ತೋರಿಸುತ್ತಾ ಇಲ್ಲ. ನತ್ಯಕ್ಕೆ ನಮ್ಮ ಆಗ್ರಹ ಅಷ್ಟಾಗಿ ಇಲ್ಲ. ಹಾಗೆಯೇ ಧಾರ್ಮಿಕ ಶ್ರದ್ಧೆಯ ಬಗ್ಗೆ ನಮ್ಮ ಆಗ್ರಹ ಅಷ್ಟು ಮಟ್ಟಿಗೆ ಇಲ್ಲ. ಆದರೆ ಇವೊತ್ತು ಪರಿಪೋಷಿತವಾಗಿ ಇದ್ದಂಥ ಒಂದು ಇನಾಂ ವ್ಯವಸ್ಥೆ ಏನಿದೆ ಅದರ ಬಗ್ಗೆ ನಾವು ಹೆಚ್ಚು ವಾದಕ್ಕೆ ಒಳಗಾಗಿದ್ದೇವೆ. ಅದು ಯಾವ ಒಂದು ಧರ್ಮವನ್ನು ಎತ್ತಿಹಿಡಿಯತೋ ಆ ಧರ್ಮವೇ ಇಂದು ಕುರುಡಾಗಿದೆ, ಅಂಧವಾಗಿದೆ ಜನತೆ ಆಕಡೆಗೆ ನೋಡುತ್ತಾ ಇದೆ ಎಂದು ಇವೊತ್ತು ಹೇಳಬೇಕಾಗಿದೆ. ಅದೇ ನಾವು ಇವೊತ್ತು ಬಹಳ ಮುಖ್ಯವಾಗಿ ಅರ್ಥಮಾಡಿಕೊಳ್ಳಬೇಕಾದದ್ದು. ಇಲ್ಲಿ ಕೋಮುವಾರು ಪ್ರಶ್ನೆ ಇಲ್ಲ. ಇದು ಇಡೀ ಹಿಂದೂ ಸಮಾಜದ ಪ್ರಶ್ನೆ ಕೂಡ ಆಗುತ್ತದೆ. ಇದರಲ್ಲಿ ಅಸ್ಪೃಶ್ಯತೆ ಮತ್ತು ಅದರ ಬಗ್ಗೆ ನಾವು ತಳೆದಿರತಕ್ಕ ಮನೋಭಾವ, ಅವರ ಹಿನ್ನೆಲೆಯಲ್ಲ ಬಹಳವಾಗಿ ತನ್ನ ಒಂದು ಪರಿಣಾಮವನ್ನು ಉಂಟುಮಾಡತಕ್ಕದ್ದಾಗಿದೆ. ನಾವು ಆತ್ಮವಂಚಕರಾಗಿ, ಪರಿಸ್ಥಿತಿಯನ್ನು ಎದುರಿಸಲಾರದೆ, ಅದು ತಾನಾಗಿಯೇ ಬಗೆಹರಿದೀತು ಎಂಬ ಒಂದು ಉದಾಸೀನಭಾವವನ್ನು ತಾಳುವುದರಿಂದ ಪ್ರಗತಿಗೆ ಬಹಳವಾಗಿ ಹೆಟ್ಟು ಬೀಳುತ್ತದೆ ಎಂಬುದು ಬಹಳ ಮುಖ್ಯವಾದ ವಿಷಯ. ಶ್ರೀಮಾನ್ ಭೀಮಪ್ಪನಾಯಕರು ಇದನ್ನು ಏಕೆ ಪ್ರಶ್ನೆಮಾಡುತ್ತೀರಿ ಎಂದು ಅಪ್ಪಣೆಕೊಡಿಸಿದರು. ಈ ದಿನದ ಪತ್ರಿಕೆಯಲ್ಲಿ ತಾವು ನೋಡಿದ್ದೀರಿ. ಈ ಮನೂದೆ ಮಂಡನೆ ಆದ ಬಗ್ಗೆ ವರದಿ ಆಗಿದೆ; ಮತ್ತು ಅದೇ ನಂದರ್ಭದಲ್ಲಿ ಅನೇಕ ಶಿಷ್ಯರು ತಮ್ಮ ಅಭಿಪ್ರಾಯಗಳನ್ನು ಹೊರಗಡೆ ವ್ಯಕ್ತಪಡಿಸಿದ್ದಾರೆ. ಹೊರಗಡೆ ಅಭಿಪ್ರಾಯಗಳಿಗೆ ಈ ಮಾನ್ಯ ನಭೆಯು ಮತ್ತು ನದಸ್ಯರು ಗಮನ ಕೊಡಬಾರದು ಎಂಬ ನಿಯಮವೇನೂ ಇಲ್ಲ. ನಾನು ನಿನ್ನೆ ಕೂಡ ಎಲ್ಲರಲ್ಲೂ ಪ್ರಾರ್ಥನೆಮಾಡಿಕೊಂಡೆ. ಈ ಇನಾಂ, ಜಹಗೀರಿ ವ್ಯವಸ್ಥೆಗೂ, ಭೂನುಧಾರಣೆ ವ್ಯವಸ್ಥೆಗೂ ಧರ್ಮವನ್ನು ಎತ್ತಿ ಗಂಟುಹಾಕಬೇಡಿ. ಅದರಿಂದ ಅಚಾತುರ್ಯ ನಡೆಯುತ್ತದೆ, ಅದು ತಪ್ಪು ಕಲ್ಪನೆಗೆ ಎಡೆಕೊಡುತ್ತದೆ, ಅದರಿಂದ ಅನಾಹುತ ಆದೀತು ಎಂದು ಹೇಳಿ ಬಹಳ ನವ್ರುತೆಯಿಂದ ವಿನಂತಿ ಮಾಡಿದೆ. ಅನೇಕರಿಗೆ ಬಹುಶಃ ಅದು ನಿಜವಾಗಿಯೂ ಒಪ್ಪಿಗೆಯಾಗಿ ಅದು ಅವರಿಗೆ ನರಿ ಎಂದು ಕಂಡಿತೋ ಅನ್ನುವ ರೀತಿಯಲ್ಲ ಪ್ರಚಾರಮಾಡಿಕೊಂಡು ಹೋಗಿದ್ದಾರೆ. ಇಲ್ಲಿ ಒಂದುಕಡೆ ಬರೆಯುತ್ತಾರೆ ಗುರುಗಳೇ ಮಠ ಬಿಟ್ಟು ಹೋಗಬಹುದು ಎಂದು. ಇದು ಜನತೆಯಲ್ಲಿ ಒಂದು ಕಳವಳವನ್ನುಂಟುಮಾಡತಕ್ಕ ಪ್ರಚಾರ. ಹಾಗೇನಾದರೂ ನರ್ಕಾರಕ್ಕೆ ಉದ್ದೇಶ ಇದ್ದರೆ ಅದನ್ನು ತಿಳಿಸಿದರೆ ನಾನೂ ಕೂಡ ಆ ಉದ್ದೇಶವನ್ನು ಖಂಡಿಸುವುದಕ್ಕೆ ಇವೊತ್ತು ಸಿದ್ಧನಿದ್ದೇನೆ. ಏಕೆಂದರೆ ನಾನು ಒಬ್ಬ ನಮಾಜವಾದದ ಪಂಥಕ್ಕೆ ಸೇರಿದವನಾಗಿ . . . .

ಶ್ರೀ ಪಿ. ಆರ್. ರಾಮಯ್ಯ (ಬನವನಗುಡಿ).—ಆ ಮಾತು ಯಾರು ಹೇಳಿದ್ದಾರೆ, ಗುರುಗಳು ಹೊರಟು ಹೋಗಬಹುದು ಎಂದು?

ಶ್ರೀ ಎಸ್. ಗೋಪಾಲಗೌಡ.—ನುಂದರಂ ಅಯ್ಯರ್ ಅನ್ನುವವರೊಬ್ಬರು ಆರ್ಟಿಕರ್ ಬರೆದಿದ್ದಾರೆ.

ಶ್ರೀ ಪಿ. ಆರ್. ರಾಮಯ್ಯ.—ಗುರುಗಳು ಹೇಳಿಲ್ಲ ಆ ಮಾತು.

ಶ್ರೀ ಎಸ್. ಗೋಪಾಲಗೌಡ.—ಗುರುಗಳ ಮಾತು ನಾನು ಏಕೆ ಹೇಳುವುದಕ್ಕೆ ಹೋಗುತ್ತೇನೆ? ನನ್ನ ದೃಷ್ಟಿ ನಾಮಾನ್ಯವಾಗಿ ರಾಜಕೀಯ ದೃಷ್ಟಿ. ನಮಾಜದಲ್ಲಿ ಹೆಚ್ಚಾಗಿ ಆರ್ಥಿಕ ನಮಾನತೆ ಉಂಟಾಗಬೇಕು, ನಾಮಾಜಿಕ ನಮಾನತೆ, ನ್ವಾತಂತ್ರ

(ಶ್ರೀ ಎಸ್. ಗೋಪಾಲಗೌಡ.)

ಇರಬೇಕು ಎಂಬುದನ್ನೇ ನಾನು ಹೆಚ್ಚು ಪ್ರಾಮುಖ್ಯವಾಗಿ ನೋಡತಕ್ಕವನು; ಅದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತೇನೆ ಮತ್ತು ಧರ್ಮ ಪ್ರತಿಯೊಬ್ಬ ಮನುಷ್ಯನ ಪ್ರೇಯಸ್ಕ್ಕಾಕವಾದ ಒಂದು ಭಾವ ಎಂದು ಕೂಡ ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ನಾನು ಒಂದು ಧರ್ಮಕ್ಕೆ ಉತ್ತೇಜನಕೊಟ್ಟು ಮತ್ತೊಂದು ಧರ್ಮವನ್ನು ಹಳಿಯಬೇಕಾಗಿಲ್ಲ. ಆ ಕೆಲಸಮಾಡಬೇಕೆಂಬ ಉದ್ದೇಶ ನನಗೆ ಇಲ್ಲ. ಆದರೂ ಕೂಡ ಇಂದು ಜನತೆಯಲ್ಲಿ ಉಂಟಾಗಿರುವ ಒಂದು ತಪ್ಪು ತಿಳಿವಳಿಕೆ ಏನಿದೆ ಅದನ್ನು ತೊಡೆದುಹಾಕುವುದು ಬಹಳ ಮುಖ್ಯ, ಅದರಿಂದ ಹೆಚ್ಚಿನ ಒಂದು ಉಪಕಾರವಾದೀತು ಎಂದು ನಾನು ಭಾವಿಸುತ್ತೇನೆ.

ಸ್ವಾಮಿ, ನಾನು ಈ ನಮ್ಮ ಧರ್ಮ ಕಲುಷಿತವಾಗಿದೆ ಎಂಬುದನ್ನು ಹೇಳುತ್ತಾ ಇದ್ದೆ. ಆಚಾರ ವಿಚಾರರಹಿತವಾಗಿದೆ, ಅದರಿಂದಲೇ ಈ ಗೊಂದಲ ಬಂದಿದೆ ಎಂಬುದನ್ನು ಹೇಳುತ್ತಾ ಇದ್ದೆ. ಅದಕ್ಕೆ ಅಸ್ಪೃಶ್ಯತೆ ಇರುವುದನ್ನು ಉದಾಹರಣೆಯಾಗಿ ಕೊಚ್ಚಿದ್ದೆ. ಈ ಸಂದರ್ಭದಲ್ಲಿ ಮಹಾತ್ಮಾ ಗಾಂಧೀಜಿಯವರು ಅಸ್ಪೃಶ್ಯತೆಯ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ ಅದನ್ನು ಉದಹರಿಸುವುದು ಅಷ್ಟು ತಪ್ಪೇನೂ ಅಲ್ಲ ಎಂದು ತಿಳಿದುಕೊಂಡಿದ್ದೇನೆ. ಅದನ್ನು ಸಭೆಯ ಗಮನಕ್ಕೆ ತರಬೇಕೆಂದು ಇದ್ದೇನೆ:—

> "ಜೋ ಕಿಸೀ ಭೀ ಬಾತ್ ಮೆ ಹಮಸೆ ಅಲಗ್ ನಹೀ ಹೈ, ಔರ್ ಜೋ ಅನೇಕ ತರಹಸೆ ಸಮಾಜ್ ಕೀ ಭಾರೀ ಸೇವಾ ಕರ್‌ರಹಾ ಹೈ, ಐಸಾ ಮಾನವ್ ಜಾತಿ ಕೆ ಏಕ್ ಬಡೆ ಜನಸಮೂಹ ಕೊ ನಿಕಾಲ್ ಬಾಹರ್ ಕರ್ ದೇನೆ ಕಾ ಘೋರ್ ಪಾಪ್ ಹಮನೆ ಕಿಯಾ ಹೈ. ಇಸ್ ಪಾಪ್ ಮೆ ಸೆ ಹಿಂದೂಧರ್ಮ ಜಿತನೀ ಜಲ್ದೀ ನಿಕಲ್ ಜಾಯೆ ಉತನೀ ಹೀ ಉಸಕೀ ಬಡಾಯಾ ಔರ್ ಪ್ರತಿಷ್ಠಾ ಹೈ.
>
> ಜೈಸೆ ಏಕ್ ರತ್ತೀ ಸಂಖಯಾ ಸೆ ಲೋಟಾಭರ್ ದೂಧ್ ಬಿಗಡ್‌ಜಾತಾ ಹೈ, ಉಸೀ ಪ್ರಕಾರ್ ಅಸ್ಪೃಶ್ಯತಾ ಸೆ ಹಿಂದೂ ಧರ್ಮ್ ಭ್ರಷ್ಟ್ ಹೋಜಾತಾ ಹೈ. ಅಸ್ಪೃಶ್ಯತಾ ಕೀ ರೂಢಿ ಮೆ ಧರ್ಮ ನಹೀಂ ಕಿನ್ತು ಅಧರ್ಮ ಹೈ.
>
> ಇಸ್ ಜನ್ಮ ಮೆ ಮುಝೆ ಮೋಕ್ಷ್ ನ ಮಿಲೆ ತೆ ಮೇರಾ ಆಕಾಂಕ್ಷಾ ಹೈ ಕಿ ಅಗಲೇ ಜನ್ಮ ಮೆ ಕಿಸೀ ಭಂಗೀ ಕೇ ಘರ್ ಮೇರಾ ಜನ್ಮ ಹೋ."
>
> ಗಾಂಧೀಜೀ.

ಈ ಹಿಂದೂಧರ್ಮದಲ್ಲಿ ಉಂಟಾಗಿರತಕ್ಕಂಥ ಅಸ್ಪೃಶ್ಯತೆ ಧರ್ಮವಾಗುವುದಿಲ್ಲ, ಅಧರ್ಮವಾಗುತ್ತದೆ. ಅದನ್ನು ಎಷ್ಟುಬೇಗ ನಾವು ಪರಿಹರಿಸಿಕೊಂಡರೆ ಅಷ್ಟೂ ಒಳ್ಳೆಯದು ಎಂದು ಹೇಳಿ, ಅವರು ಮುಂದೆ ಈ ರೀತಿ ಹೇಳಿದ್ದಾರೆ:—ನಾನು ಈ ಜನ್ಮದಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗದೇ ಹೋದರೆ ಮುಂದಿನ ಜನ್ಮದಲ್ಲಿ ಭಂಗಿಯಾಗಿ, ಹರಿಜನರಲ್ಲಿ ಹುಟ್ಟುವುದಕ್ಕೆ ಆಶೆಪಡುತ್ತೇನೆ ಎಂದು ಹೇಳಿದ್ದಾರೆ. ಬಹುಶಃ ಆ ವಾಕ್ಯ ಪರಿಪಾಲನೆಗಾಗಿಯೇ ಮಹಾತ್ಮ ಗಾಂಧೀಜಿಯವರ ಕೊಲೆಯಾಗಿದ್ದರೂ ಆಗಿರಬಹುದು. ಆ ವಿಮರ್ಶೆಗೆ ನಾನು ಹೋಗುವುದಿಲ್ಲ. ಆದ್ದರಿಂದ ಈ ಜಟಿಲವಾದ ಧರ್ಮಸಮಸ್ಯೆಯನ್ನು ಈ ಇನಾಂ ಪದ್ಧತಿಯ ರದ್ದಿಯಾತಿಗೆ ದಯವಿಟ್ಟು ಯಾರೂ ನಿಕಟಸಂಬಂಧವೆನ್ನು ಕಲ್ಪಿಸಬಾರದು ಎಂದು ಹೇಳಿ ಮತ್ತೊಮ್ಮೆ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಸ್ವಾಮಿ, ಈಗ ಮೈಸೂರು ಸರ್ಕಾರ ಭೂಸುಧಾರಣೆಯ ವಿಷಯದಲ್ಲಿ ಈ ಒಂದು ಮಸೂದೆಯನ್ನು ಸಭೆಯ ಮುಂದೆ ಮಂಡಿಸಿದೆ.

1-30 P.M.

ಈಗಾಗಲೆ ಇನಾಂತಿಗಳಲ್ಲಿ ಸುಮಾರು ನಾಲ್ಕು ಸಾವಿರ ಎಕರೆಗಳನ್ನು ರದ್ದುಪಡಿಸುವ ಒಂದು ಮಸೂದೆ ಕಾನೂನಾಗಿದೆ. ಈಗಿರತಕ್ಕಂಥ ದೇವಾದಾಯ ಮತ್ತು ಬ್ರಹ್ಮಾದಾಯ ಇನಾಂ ಮತ್ತು ಜಹಗೀರುಗಳಲ್ಲಿ 47,440 ಎಕರೆಗಳು ಶೃಂಗೇರಿಗೆ ಸಂಬಂಧಪಟ್ಟ ಜಹಗೀರಿಯಲ್ಲಿವೆ. ಉಳಿದುದು ಸಣ್ಣ ಸಣ್ಣ ದೇವಸ್ಥಾನಗಳಿಗೆ ಮತ್ತು ಸಂಸ್ಥೆಗಳಿಗೆ ಸೇರಿದೆ. ಈ ಬಿಲ್ಲಿನಲ್ಲಿ ಹಿಂದಿನ ಮಸೂದೆಯಲ್ಲಿ ಯಾವ ರೀತಿ ಹೇಳಿತ್ತೋ ಅದೇ ರೀತಿ ಖದೀಂ ರೈತರಿಗೂ ಮತ್ತು ಖಾಯಂ ರೈತರಿಗೂ ಅವರು ಅನುಭವಿಸಿಕೊಂಡು ಬಂದಂಥ ಭೂಮಿಯನ್ನು ಅವರ ಖಾತೆಗೆ ಹಾಕಿಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಕೊನೇ ನೋಟ್‌ನಲ್ಲಿ ಹೇಳಿರುವ ವಿಚಾರದಲ್ಲಿ ನಿನ್ನೆ ಪ್ರಶ್ನೆ ಬಂದಿದೆ. ಖದೀಂ ರೈತರಲ್ಲದಿರುವವರು ಶೃಂಗೇರಿಯಲ್ಲಿದ್ದಾರೆಯೆ ಎಂದು ಯೋಚನೆ ಮಾಡುವ ಈ ನೋಟಿನಲ್ಲಿ ಕೀಗೆ ಹೇಳಿದ್ದಾರೆ:

> "In respect of Sringeri Jahagir, it is assumed that all the tenants are kadim tenants and the net amount....."

ಇದರಲ್ಲಿ assumed ಎಂದು ಹೇಳಿದೆ. ಆದರೆ ಮಾನ್ಯ ಮಂತ್ರಿಗಳು ಹೇಳುವ ರೀತಿಯಲ್ಲಿ ಬೇರೆ ರೈತರು ಕೂಡ ಅಲ್ಲಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಬರೀ ಸೆಸ್ ಕೊಟ್ಟುಕೊಂಡಿರುವ ರೈತರೂ ಕೂಡ ಅಲ್ಲಿದ್ದಾರೆಂದು ನನಗೆ ತಿಳಿದುಬಂದಿದೆ. ಇನ್ನೂ ಉಳಿದಿರತಕ್ಕಂಥ ಜಮೀನನ್ನು ಅಂದರೆ ಕಟ್ಟಡಗಳನ್ನು ಮತ್ತು ಇತರ ಜಮೀನುಗಳನ್ನು ಸಂಸ್ಥೆಯ ಹೆಸರಿನಲ್ಲಿ ರಿಜಿಸ್ಟರು ಮಾಡಲಾಗುತ್ತದೆ ಎಂದು ಹೇಳಿದೆ ಮತ್ತು ಅವರಿಗಿರುವ ಭೂಮಿಯನ್ನು ಅವರ ಹೆಸರಿನಲ್ಲಿ ರಿಸಜಿಸ್ಟರು ಮಾಡಬೇಕೆಂತಲೂ ಮತ್ತು ಕಮ್ಯೂನರ್ ವೇಸ್ಟ್ಸ್, ಲ್ಯಾಂಡ್ಸ್, ಗೋಮಾಳದ ಜಮೀನು, ಟ್ಯಾಂಕ್‌ಬೆಡ್ಸ್ ಇತ್ಯಾದಿಗಳನ್ನು ಬಿಟ್ಟು ಬಾಕಿಯಾದ್ದನ್ನು ಖದೀಂ ಟೆನೆಂಟ್ಸ್ ಮತ್ತು ಪರ್ಮನೆಂಟ್ಸ್‌ಗೆ ಖಾತೆ ಮಾಡುತ್ತಾರೆ, ಅನಂತರವೂ ಉಳಿಯುವ ಭೂಮಿಯನ್ನು ಈ ಸಂಸ್ಥೆಗಳ ಹೆಸರಿನಲ್ಲಿ ರಿಜಿಸ್ಟರು ಮಾಡಲಾಗುತ್ತದೆ ಎಂದು ಕೂಡ ಹೇಳಿದ್ದಾರೆ.

ಆಮೇಲೆ ಕಾಂಪೆನ್ಸೇಷನ್ ವಿಷಯದಲ್ಲಿ ಜೋಡಿ, ಗ್ರಾಮಾಧಿಕಾರಿಗಳಿಗೆ ಕೊಡುವ ಪೋಟಿಗೆ, ಇತರ ಖರ್ಚುಗಳು, ಇರಿಗೇಷನ್ ಮತ್ತು ಮ್ಯಾನೇಜ್‌ಮೆಂಟಿಗಾಗುವ ಖರ್ಚು ಇವುಗಳಿಗೆ ಐದು ವರ್ಷಗಳ ಸರಾಸರಿ ದಾಮಾಷಾ ಪ್ರಕಾರ ಉತ್ಪತ್ತಿಯನ್ನು ಬಿಟ್ಟುಕೊಡುವುದನ್ನು ಕೂಡ ನಮೂದು ಮಾಡಿದ್ದಾರೆ. ಈ ಲೆಕ್ಕದ ಪ್ರಕಾರ ಸುಮಾರು 18 ಲಕ್ಷ ರೂಪಾಯಿಗಳನ್ನು ಪ್ರತಿ ವರ್ಷ ಕೊಡಬೇಕಾಗುತ್ತದೆ. ಇದರಲ್ಲಿ ಇತ್ತೀಚೆಗೆ ಕೆಲವು ವಾದಗಳು ಹುಟ್ಟಿವೆ. "ಸರ್ಕಾರಕ್ಕೆ ಇದರಿಂದ ಲುಕ್ಸಾನಾಗುವುದಿಲ್ಲವೆ? ಸುಮಾರು ವರ್ಷಕ್ಕೆ 30 ರೂಪಾಯಿಗಳನ್ನು ಒಂದು ಸಂಸ್ಥೆಗೆ ನಾವು ಕೊಟ್ಟರೆ ನಮಗೆ ಬರುವುದು ಕಂದಾಯದ ರೂಪವಾಗಿ ಮೂರು ರೂಪಾಯಿಗಳು, ಐದು ವರ್ಷಗಳಿಗೆ 150 ರೂಪಾಯಿ

ಗಳನ್ನು ಕೊಡಬೇಕು. ಯಾವ ಭೂಮಿಯನ್ನು ಪರ್ಮನೆಂಟ್ ಅಥವಾ ಖಬೀಂ ಚೆನೆಂಟಿಗೆ ನೀವು ರಿಜಿಸ್ಟರು ಮಾಡುತ್ತೀರೋ ಅವನಿಂದ ಇಷ್ಟು ಬರುತ್ತದೆ. ಆದ್ದರಿಂದ ಪ್ರತಿ ವರ್ಷವೂ ಸರ್ಕಾರಕ್ಕೆ ನಷ್ಟವಾಗುತ್ತದೆ. ಆ ಲುಕ್ಸಾನಿಗೆ ನೀವು ಅವಕಾಶ ಕೊಡುತ್ತೀರಾ? ಈ ಪದ್ಧತಿ ಉಳಿಸಿದರೆ ಏನು ತೊಂದರೆ?'' ಎಂದು ವಾದ ಮಾಡಿದರು. ಅದು ನಿಜ. ಈ ಎಲ್ಲಾ ಸಂಸ್ಥೆಗಳಿಗೂ ಗ್ರಾಂಟುಗಳನ್ನು ಕೊಟ್ಟುಕೊಂಡು ಹೋಗುವುದು ಸರ್ಕಾರಕ್ಕೆ ನಷ್ಟವೇ. ಆದರೆ ಅವುಗಳಿಗೆ ಯಾವ ರೀತಿಯ ಉತ್ಪತ್ತಿಯೂ ಇಲ್ಲದೆ ಪೂಜೆ ಪುನಸ್ಕಾರಾದಿಗಳೇ ಇಲ್ಲದೆ ಅವು ನಿಂತುಹೋಗಬೇಕೆಂಬ ಉದ್ದೇಶ ಯಾರಿಗೂ ಇಲ್ಲ. ಅವು ಎಲ್ಲಿಯವರೆಗೆ ಜನತೆಯ ಹಿತವನ್ನು ಕಾಪಾಡಿ ಜನತೆಯ ನೈತಿಕ ಶಕ್ತಿಯನ್ನು ಬೆಳೆಸತಕ್ಕಂಥ ಮತ್ತು ರೈತರಿಗೆ ಹಿತವಾದ ಕೆಲಸವನ್ನು ಮಾಡತಕ್ಕಂಥ ಸಂಸ್ಥೆಗಳಾಗುತ್ತವೆಯೋ, ಇದಕ್ಕೆ ತಕ್ಕ ವ್ಯಕ್ತಿಗಳು ಎಲ್ಲಿಯವರೆಗೆ ಆ ಸಂಸ್ಥೆಗಳಲ್ಲಿರುತ್ತಾರೋ ಅಲ್ಲಿಯತನಕ ಅವು ಯಾವುದೇ ಸರ್ಕಾರದಿಂದಾಗಲಿ ಉತ್ಪತ್ತಿಯನ್ನು ಪಡೆಯುವುದಕ್ಕೆ ಅರ್ಹವಾಗಿರುತ್ತವೆ. ಅದಕ್ಕೆ ಯಾವ ರೀತಿಯ ಒಂದು ಗ್ಯಾರಂಟಿಯನ್ನೂ ನಾವು ಕೊಡಬೇಕಾದ್ದಿಲ್ಲ. ಅವು ಜನತೆಯ ಸರ್ವಶಕ್ತಿಯ ಮೇಲೆ, ಜನತೆಯ ಉತ್ತೇಜನದ ಮೇಲೆ ಮತ್ತು ಸಮೂಜದ ರೂಪರೇಖೆಗಳ ಮೇಲೆ ನಿಂತಿವೆ. ಕೊನೆಯ ತೀರ್ಮಾನ ಜನತೆ ಕೊಡಬಲ್ಲುದೇ ಹೊರತು ನಾವಾಗಲಿ ಅಥವಾ ಯಾವುದೇ ಒಂದು ಮಂತ್ರಿ ಮಂಡಲವಾಗಲಿ ಕೊಟ್ಟರೆ ಅದು ಕೊನೆಯ ತೀರ್ಮಾನವೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಆ ದೃಷ್ಟಿಯಿಂದ, ನಾವು ಇಂದು ಸರ್ಕಾರಕ್ಕೆ ಸ್ವಲ್ಪ ನಷ್ಟವಾಗುತ್ತದೆಂದು ಇಟ್ಟುಕೊಂಡರೂ ಕೂಡ ಅವುಗಳ ಒಂದು ಸ್ಥಾನದ ದೃಷ್ಟಿಯಿಂದ ಮತ್ತು ಪರಂಪರೆಯ ದೃಷ್ಟಿಯಿಂದ ಇನ್ನು ಮುಂದೆಯೂ ತಮ್ಮ ಕರ್ತವ್ಯಗಳನ್ನು, ಧರ್ಮಗಳನ್ನು ಪರಿಪಾಲನೆ ಮಾಡಿಕೊಂಡು ಹೋಗುವ ದೃಷ್ಟಿಯಿಂದ ಅವುಗಳಿಗೆ ನಲ್ಲುವ ಒಂದು ಉತ್ಪತ್ತಿಯನ್ನು ಸರ್ಕಾರ ಕೊಡಲೇ ಬೇಕಾಗುತ್ತದೆ.

ಇನ್ನು ಜನತೆಯ ದೃಷ್ಟಿಯಿಂದ—ಸಾಮಾನ್ಯವಾಗಿ ಧಾರ್ಮಿಕ ದೃಷ್ಟಿಯಿಂದಲ್ಲ—ರೈತರು ಯಾರಿದ್ದಾರೋ ಅವರ ದೃಷ್ಟಿಯಿಂದ ಈ ಮಸೂದೆಯನ್ನು ಪರ್ಯಾಲೋಚಿಸಬೇಕು. ಇಲ್ಲಿ ಹೇಳಬಹುದು, ಬರೀ ರೈತರ ದೃಷ್ಟಿಯಿಂದ ಈ ಮಸೂದೆಯನ್ನು ತಂದು ಈ ರೀತಿಯಾಗಿ ಕೆಲವರಿಗೆ ಇದರಿಂದ ತೊಂದರೆಯನ್ನು ಕೊಡುವುದು ನ್ಯಾಯವೆ ಎಂದು ಪ್ರಶ್ನೆ ಹಾಕಿದ್ದಾರೆ. ಇಲ್ಲಿ ತಾರತಮ್ಯ ದೃಷ್ಟಿಯಿಲ್ಲ. ಆದ್ದರಿಂದ ಒಬ್ಬರ ಭೂಮಿಯನ್ನು ಅಥವಾ ಆಸ್ತಿಯನ್ನು ಕಿತ್ತು ಇನ್ನೊಬ್ಬರಿಗೆ ಹಂಚತಕ್ಕಂಥ ಪ್ರಶ್ನೆಯೇ ಇಲ್ಲ. ಇದರಲ್ಲ ಮುಖ್ಯವಾಗಿ ಹಳೆಯ ಪದ್ಧತಿಯೇನಿದೆಯೆಂದು ಹೇಳಿದೆಯೋ ಅದು ಹೋಗಬೇಕು, ಬದಲಾವಣೆಯಾಗಬೇಕು ಎಂಬುದೊಂದು ವಿಷಯ. ಪದ್ಧತಿಯಲ್ಲ ಮಾರ್ಪಾಟಾಗಬೇಕು. ಇನ್ನೊಂದು ವಿಷಯ ಸಮಗ್ರ ಆರ್ಥಿಕದೃಷ್ಟಿಯಿಂದ ಯಾರು ಬಡವರಿದ್ದಾರೋ ಯಾರು ಉಳುಮೆಗಾರರು, ರೈತರು ಇದ್ದಾರೋ ಅವರಿಗೆ ತಮ್ಮದೇ ಆದ ಒಂದು ತುಂಡು ಭೂಮಿಯನ್ನು ದೊರಕಿಸಿಕೊಡಬೇಕು, ಅಂದರೆ ಆ ಮೂಲಕ ಅವರ ಉತ್ಪತ್ತಿಯನ್ನು ಹೆಚ್ಚಿಸಬೇಕು, ಅವರಿಗೆ ಆರ್ಥಿಕ ಸಮಾನತೆಯನ್ನು ತಂದು ಕೊಡಬೇಕೆಂಬುದು ಮುಖ್ಯವಾದ ಒಂದು ದೃಷ್ಟಿ. ಈ ದಿಕ್ಕಿನಲ್ಲಿ ಈ ಮಸೂದೆ ಸ್ವಲ್ಪಮಟ್ಟಿಗೆ ಸಹಕಾರಿಯಾಗುತ್ತದೆ. ಕಳೆದ 15-20 ವರ್ಷಗಳಿಂದ ಜಹಗೀರಿಯ ವಿಷಯ ನೋಡಿದರೆ ಸರ್ಕಾರ ಅದರ ಆಡಳಿತವನ್ನು ನಡೆಸುತ್ತಿದೆ. ಈ ಸರ್ಕಾರ ಆಡಳಿತ ನಡೆಯಿಸುವುದರಲ್ಲಿ ಜಹಗೀರಿಯ ಎಲ್ಲಾ ಮ್ಯಾನೇಜ್‌ಮೆಂಟನ್ನೂ ಹಣಕಾಸಿಗೆ ಸಂಬಂಧ ಪಟ್ಟಹಾಗೆ ನೋಡಿಕೊಂಡು ಬರುತ್ತಿದೆ, ಅನೇಕ ಜನ ರೈತರಿದ್ದಾರೆ. ಈ ರೈತರಿಗೇನಾದರೂ ಒಂದು ಪರಿಹಾರವಿದೆಯೆ ಎಂದು ನೋಡಿದರೆ, ಯಾವುದಾದರೂ ಒಂದು ಗೇಣಿ ಸಂಬಂಧದಲ್ಲಾಗಲಿ ಅಥವಾ ಮಳೆ ಬಂದು ಕೊಚ್ಚಿಕೊಂಡು ಹೋಗಿದೆಯೆಂದು ಹೇಳುವ ಸಂದರ್ಭದಲ್ಲಾಗಲಿ ಅಥವಾ ತೋಟಕ್ಕೆ ನಷ್ಟವಾಗಿರುವ ಸಂದರ್ಭದಲ್ಲಾಗಲಿ, ಇನ್ನಾವುದಾದರೂ ಸಂದರ್ಭದಲ್ಲಾಗಲಿ ಪರಿಹಾರ ಬೇಕಾದರೆ ಸರ್ಕಾರವನ್ನು ಕೇಳಿದರೆ ಸರ್ಕಾರದವರು ಮಠದವರನ್ನು ಕೇಳಿ ಎಂದು ಹೇಳುತ್ತಾರೆ. ಈ ರೀತಿಯಲ್ಲಿ ಒಂದು ದ್ವಿಮುಖವಾದ ಮ್ಯಾನೇಜ್‌ಮೆಂಟಿದೆ. ಆ ದೃಷ್ಟಿಯಿಂದ ರೈತರಾರಿಗೂ ಒಂದು ಸಂರಕ್ಷಣೆಯಿಲ್ಲ ಮತ್ತು ಇದಕ್ಕೆ ಯಾರಿಂದ ಪರಿಹಾರ ಪಡೆಯಬೇಕೆಂಬುದು ಕೂಡ ಅವರಿಗೆ ಗೊತ್ತಾಗುವುದಿಲ್ಲ. ಅಲ್ಲದೆ ಈ ಕಾರಣದಿಂದ ಅನೇಕ ಭೂಮಿಗಳು ಬಹಳ ಹೀನಸ್ಥಿತಿಯಲ್ಲವೆ, ತೋಟಗಳು ಹೀನಸ್ಥಿತಿಯಲ್ಲಿವೆ. ಸಾಮಾನ್ಯವಾಗಿ ನಾವು ನೋಡಿದರೆ ನಮ್ಮ ಕಡೆ ಒಂದು ತರಹವಿದೆ. ತೀರ ಕೆಟ್ಟತೋಟ, ಅಡಕೆ ಮರಗಳು ಮುಂತಾದುವು ಒಣಗಿ ಕೆಲಸಕ್ಕೆ ಬಾರದ ಗಿಡ ಬೆಳೆದಿರುವ ತೋಟ ಇರುವುದನ್ನು ಯಾರದೆಂದು ಕೇಳಿದರೆ ದೇವಸ್ಥಾನದ ಸ್ವತ್ತು ಅಥವಾ ಮಠದ ಸ್ವತ್ತು ಎಂದು ಜನರು ಸಾಮಾನ್ಯವಾಗಿ ಹೇಳುವುದನ್ನು ಕೇಳಬಹುದು. ಈ ಜಮೀನು, ತೋಟ ಒಬ್ಬರಕೈಯಿಂದ ಇನ್ನೊಬ್ಬರ ಕೈಗೆ ಬಂದರೂ ಅವರಿಗೆ ಯಾವ ಆಸಕ್ತಿಯೂ ಇರುವುದಿಲ್ಲ. ಈ ದಿವಸ ಕೈದಾಟುವುದನ್ನು ಕಾಣಬಹುದೇ ವಿನಾ ಇನ್ನೇನೂ ಇಲ್ಲ. ಆಮೇಲೆ ಖಾಸಗಿ ಸಾಹುಕಾರರ ಹತ್ತಿರ ಹೋಗಿ ಅವರ ಭೂಮಿಯಲ್ಲಿ ಸಾಗುವಳಿ ಮಾಡಿದರೆ ಅಥವಾ ಅವರ ತೋಟವನ್ನು ವಹಿಸಿಕೊಂಡರೆ ಅಲ್ಲಿರುವ ಕಳೆ ತೆಗೆಯಲು, ಅದಕ್ಕೆ ಕಾಂಪೌಂಡು ಹಾಕಲು 100 ರೂಪಾಯಿಗಳು ಕೊಡಿ ಎಂದು ಸಾಲವನ್ನು ತರಬಹುದು. ಇಲ್ಲ ಅಮಲ್ದಾರರು ಸಾಲಕೊಡುವುದಿಲ್ಲ, ಜಹಗೀರುದಾರರು ಸರ್ಕಾರಕ್ಕೆ ವಹಿಸಿದ್ದೇವೆಂದು ಹೇಳಿ ಒಂದೇ ಮಾತಿನಲ್ಲಿ ಜವಾಬ್ದಾರಿ ತಪ್ಪಿಸಿಕೊಳ್ಳುತ್ತಾರೆ. ಹೀಗಾಗಿ ಒಂದೆರಡು ತೋಟವಲ್ಲ, 5–10 ಎಕರೆಗಳ ಪ್ರಶ್ನೆಯಲ್ಲ, ಸಹಸ್ರಾರು ಎಕರೆ ಜಮೀನು ಅನೇಕ ಅತ್ಯುತ್ತಮವಾದ ತೋಟ, ಗದ್ದೆ ಮುಂತಾದುವು ಈ ದಿವಸ ಹಾಳಾಗಿ ಹೀನಸ್ಥಿತಿಗೆ ಬಂದು, ಅಲ್ಲೇನೂ ಫಸಲೇ ಆಗದಿರುವ ಪರಿಸ್ಥಿತಿಯಿದೆ. ರೈತರಿಗೆ ಯಾವುದೇ ಒಂದು ರಕ್ಷಣೆಯಿಲ್ಲ. ಆ ದೃಷ್ಟಿಯಿಂದ ಈ ಜಹಗೀರಿ, ಇನಾಂ ಮತ್ತು ಇತರ ಆಡಳಿತದಲ್ಲಿರುವ ರೈತರಿಗೆ ಬೇರೆ ರೈತವಾರಿ ಪದ್ಧತಿಯಲ್ಲ ಯಾವ ರೀತಿಯ ಸೌಲಭ್ಯ ಕಲ್ಪಿಸಿಕೊಟ್ಟಿರುವರೋ ಹಾಗೆ, ಚೆನೆನ್ಸಿ ಕಾನೂನು ಮಾಡುವುದರಿಂದ ಮತ್ತು ಬೇರೆ ವ್ಯಕ್ತಿ ಸಂಬಂಧವಾದ ಇನಾಂ ವಜಾಮಾಡಿ ಅಲ್ಲಿರುವ ರೈತರಿಗೆ ಹೆಚ್ಚಿನ ಸೌಲಭ್ಯ ಕೊಡಬೇಕೆಂದು ಯೋಚನೆ ಮಾಡಿರುವ ರೀತಿಯಲ್ಲ, ಈ ಇನಾಂ ಯಾರಿಗೇ ಸೇರಿರಲಿ, ರೈತರ ಹಿತದೃಷ್ಟಿಯಿಂದ ಅವರಿಗೆ ಹೆಚ್ಚಿನ ಅನುಕೂಲವಾಗುವಂತೆ ಬೇರೆ ರೈತರಿಗೆ ಪಕ್ಕದ ಗ್ರಾಮದಲ್ಲ, ರೈತವಾರಿ ಪದ್ಧತಿಯಲ್ಲ ವ್ಯವಸಾಯ ಮಾಡಿಕೊಂಡಿರುವವರಿಗೆ ಇರಬಹುದಾದ ಎಲ್ಲಾ ಹಕ್ಕುಬಾಧ್ಯತೆಗಳನ್ನೂ ದೊರಕಿಸಿ ಕೊಡಬೇಕು. ಈ ದೃಷ್ಟಿಯಿಂದ ಇಲ್ಲೂ ಕೂಡ ಒಂದು ಸುಧಾರಣೆಯನ್ನು ತರಬೇಕಾದ್ದು ಬಹಳ ಅತ್ಯಗತ್ಯವಾಗಿದೆ. ಆದ್ದರಿಂದ ಈ ದೇವಾದಾಯ ಮತ್ತು ಬ್ರಹ್ಮಾದಾಯ ಇನಾಂಗಳೇನಿವೆಯೋ ಅವುಗಳನ್ನು ರದ್ದುಮಾಡಬೇಕಾದ್ದು ಬಹಳ ಅಗತ್ಯವಾಗಿದೆ. ರದ್ದುಮಾಡುವಾಗ ರೈತರಿಂದೆ

(ಶ್ರೀ ಎಸ್. ಗೋಪಾಲಗೌಡ)

ಕಾಂಪೆನ್ಸೇಷ್ ಏನು ಬರುತ್ತದೆ, ಏನು ತೆಗೆದುಕೊಳ್ಳಬೇಕು ಎಂದು ಗೊತ್ತುಮಾಡಿದೆಯೋ ಅದನ್ನು ತೆಗೆದುಕೊಳ್ಳುವಾಗ ಸರ್ಕಾರ ಆಯಾ ರೈತರ ಒಂದು ಆರ್ಥಿಕ ಪರಿಸ್ಥಿತಿಯನ್ನು ಗಣನೆಗೆ ತಂದುಕೊಂಡು ಅವರಿಗೆ ಇನ್ನೂ ಹೆಚ್ಚಿನ ಒಂದು ಸೌಲಭ್ಯವನ್ನು ಕಲ್ಪಿಸಿಕೊಡುವುದು ಅಗತ್ಯವೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಈ ಮನೂದೆ ಈಗತಾನೇ ಕಾನೂನಾಗಿರತಕ್ಕಂಥ ಮನೂದೆ ಆಗಿರುವುದರಿಂದ ಇದು ಸೆಲೆಕ್ಟ್ ಸಮಿತಿಗೆ ಹೋಗಿ ಚರ್ಚೆಯಾಗಿ ಮತ್ತೆ ಪುನಃ ಇಲ್ಲಿ ಬಂದು ಮತ್ತೆ ಸಮಿತಿಗೆ ಹೋಗಿ ಚರ್ಚೆಯಾಗಿ ಮತ್ತೆ ಇಲ್ಲಿ ಯಾವ ರೀತಿ ಚರ್ಚೆಯಾಯಿತೋ ಅಷ್ಟು ಹೆಚ್ಚು ಕಾಲವನ್ನು ಈ ಮನೂದೆಗೆ ಕೊಡಬೇಕಾದುದು ಅಷ್ಟೇನೂ ಅಗತ್ಯವಿಲ್ಲ. ಏಕೆಂದರೆ, ದೇವಾದಾಯ, ಧರ್ಮಾದಾಯ ಎಂಬ ವಿಷಯವನ್ನು ಬಿಟ್ಟರೆ ಬಾಕಿ ವ್ಯವಸ್ಥೆ ಎಲ್ಲಾ ರೈತರಿಗೆ ಸಂಬಂಧಪಟ್ಟ ಕಾನೂನು ಕಾಯಿದೆಗಳು ಒಂದು ರಿಪೋರ್ಟ್ ರೀತಿ ಇದೆ. ಆದುದರಿಂದ ಇಲ್ಲಿ ನಡೆದಿರತಕ್ಕ ಚರ್ಚೆಯನ್ನು ಗಮನಿಸಿ, ಇದರಲ್ಲಿರತಕ್ಕ ಲೋಪದೋಷಗಳನ್ನು ಸಂಸ್ಥೆಗಳ ಮೂಲಕ ಪರಿಹರಿಸಬೇಕೆಂದು ಈ ಮನೂದೆ ಹೆಚ್ಚು ಕಾಲವನ್ನು ತೆಗೆದುಕೊಂಡು ಕಾಲಹರಣವಾಗತಕ್ಕ ವ್ಯವಸ್ಥೆ ಮಾಡದೆ, ಈ ಅಧಿವೇಶನದಲ್ಲಿಯೇ ಇದನ್ನು ಮಂಜೂರು ಮಾಡುವುದು ಒಳ್ಳೆಯದೆಂದು ಹೇಳಿ ನಾನು ಈ ಮನೂದೆಯನ್ನು ಸಮರ್ಥಿಸುತ್ತೇನೆ.

Mr. SPEAKER.—Yesterday the Deputy Speaker had promised Sri Shivappa, I am told.

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ನಾನು ಈ ಮನೂದೆಯನ್ನು ಸ್ವಾಗತಿಸುತ್ತೇನೆ. ಈ ವಿಚಾರದಲ್ಲಿ ಹೆಚ್ಚಿಗೆ ಮಾತನಾಡುವುದಿಲ್ಲ, ಅತಿ ಜಾಗ್ರತೆಯಾಗಿ ಮುಗಿಸಿ ಇತರರಿಗೆ ಮಾತನಾಡಲು ಅವಕಾಶಕೊಡುತ್ತೇನೆ. ಈ ಮನೂದೆಯನ್ನು ಅವಸರವಾಗಿ ಜಾರಿಗೆ ತರಬಾರದು, ಮೊದಲು ಜನಾಭಿಪ್ರಾಯವನ್ನು ಪಡೆಯಬೇಕು, ಎಂದು ಕೆಲವರು ಮಿತ್ರರು ನಿನ್ನೆಯದಿನ ಹೇಳಿದರು. ಈ ಪಾದದಲ್ಲಿ ಅರ್ಥವಿಲ್ಲವೆಂದು ನಾನು ತಿಳಿಸಬೇಕಾಗಿದೆ. 1947ರಲ್ಲಿ ಎಂದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕಿತೋ ಅಂದೇ ಈ ಇನಾಂದಾರರಿಗೆಲ್ಲಾ ನೋಟೀಸ್ ಕೊಟ್ಟ ಹಾಗೆ ಎಂದು ನಾನು ಅಭಿಪ್ರಾಯಪಡುತ್ತೇನೆ. ಇಷ್ಟೇ ಅಲ್ಲದೆ, ಗುಂಡಪ್ಪ ಗೌಡರ ಸಮಿತಿ ವರದಿಯಲ್ಲಿಯೂ ರೈತರಿಗೆ ಈಗಿರತಕ್ಕ ವ್ಯವಸ್ಥೆಯಿಂದ ತೊಂದರೆ ಇದೆಯೆಂಬುದನ್ನು ತಿಳಿಸಿದ್ದಾರೆ. ನಿಜವಾಗಿಯೂ ಯಾವ ಪ್ರದೇಶದಲ್ಲಿಯೂ ರೈತರಿಗೂ ಮತ್ತು ಸರ್ಕಾರದವರಿಗೂ ನೇರವಾದ ಸಂಬಂಧವಿಲ್ಲದೇ ಇರತಕ್ಕಂಥ ಪದ್ಧತಿ ಈ feudal system ಇರುವುದು ಸಮಂಜಸವಾಗಿ ಕಾಣುವುದಿಲ್ಲ.

ನನಗೆ ಶ್ರೀ ಪಿ. ಆರ್. ರಾಮಯ್ಯನವರ ವಿಚಾರದಲ್ಲಿ ಪೂರ್ಣ ಗೌರವವಿದೆ. ಅವರು ಒಬ್ಬ ಸಮಾಜ ಸುಧಾರಕರು, ಹರಿಜನೋದ್ಧಾರ ಕಾರ್ಯದಲ್ಲಿ ನಿಶ್ಚಲ ಮನಸ್ಸಿನಿಂದ ದುಡಿದಿರುವವರು. ಅವರಲ್ಲಿ ನನ್ನ ದೊಂದು ಬಿನ್ನಹ. ಈ ರೈತಾಪಿ ವರ್ಗದಲ್ಲಿಯೂ ಅನೇಕ ಹರಿಜನರಿದ್ದಾರೆ. ಅವರಿಗೂ ಸರ್ಕಾರಕ್ಕೂ ನೇರವಾದ ಸಂಬಂಧವಿರುವಂತೆ ಮಾಡುವುದು ಅವರ ಆದ್ಯ ಕರ್ತವ್ಯವೆಂದು ನಾನು ತಿಳಿಯುತ್ತೇನೆ.

Mr. SPEAKER.—I don't think he had spoken on the merits of the Bill. How can you think so? On the amendment he spoke. I have made the matter clear.

ಶ್ರೀ ಜಿ. ಶಿವಪ್ಪ.—ಅವರು ಪ್ರತಿಭಟಿಸಿ ಮಾತನಾಡಿದರು.

Mr. SPEAKER.—Please be relevant, Sri Sivappa.

Sri G. SIVAPPA.—I am speaking out what I am feeling.

Mr. SPEAKER.—You cannot give expression to whatever you feel. It must be relevant.

ಶ್ರೀ ಜಿ. ಶಿವಪ್ಪ.—ನಾವು ಇಂಥ ವಿಚಾರಗಳಲ್ಲಿ ಕಾಲಕ್ಕನುಸಾರವಾಗಿ ನಡೆದುಕೊಂಡು ಹೋಗಬೇಕು. ಈಗಿನ ಕಾಲದಲ್ಲಿ ಆಟಂ ಬಾಂಬ್, ಹೈಡ್ರೋಜ್ ಬಾಂಬ್—ಇವುಗಳನ್ನೇ ಎದುರಿಸುವ ಶಕ್ತಿ ಜನತೆಯಲ್ಲಿ ಕಂಡುಬರುತ್ತಿರುವಾಗ ಕೇವಲ ಮೂರು ಲಕ್ಷ ರೂಪಾಯಿ ಬಂಡವಾಳದ ಅಡಳಿತವನ್ನು ಸರ್ಕಾರ ನಿರ್ವಹಿಸಿಕೊಂಡ ಮಾತ್ರಕ್ಕೆ ಒಂದು ಭಾರಿ ಧರ್ಮಸಂಸ್ಥೆ ಅದಕ್ಕಾಗಿ ಎದೆಗುಂದಬೇಕಾಗಿಲ್ಲ. ಈ ಶೃಂಗೇರಿ ಜಹಗೀರಿಯ ವಿಚಾರದಲ್ಲಿ ಒಂದು ಪೂಜ್ಯತೆ ಇದೆ, ಹಿಮಾಚಲದಿಂದ ಕನ್ಯಾಕುಮಾರಿಯವರೆಗೂ, ಅರಬ್ಬಿ ಸಮುದ್ರದಿಂದ ಬಂಗಾಳದವರೆಗೂ ಈ ಧರ್ಮ ಸಂಸ್ಥೆಯ ವಿಚಾರದಲ್ಲಿ ಬೆಂಬಲವಿದೆಯೆಂದು ಕೆಲವರು ತಿಳಿಸಿದರು. ಅಲ್ಲದೆ ಇದಕ್ಕೆ ಸರ್ಕಾರ ಕೈಹಾಕಿದರೆ ಬಹಳ ತೊಂದರೆಗೆ ಒಳಗಾಗುತ್ತದೆಂಬ ಭೀತಿಯನ್ನೂ ಕೆಲವರು ವ್ಯಕ್ತಪಡಿಸಿದರು. ಈ ರೀತಿಯ ನಂಬಿಕೆ ಏನಿದ್ದರೂ ಒಂದು ಮೂಢ ನಂಬಿಕೆಯೆಂದು ಹೇಳದೇ ವಿಧಿಯಿಲ್ಲ. ಈ ರೀತಿಯ ವಾದದಲ್ಲಿ ಏನೂ ತಿರುಳಿಲ್ಲ.

Mr. SPEAKER.—At this rate you can speak for three days.

ಶ್ರೀ ಜಿ. ಶಿವಪ್ಪ.—ಈ ಇನಾಂ ಜಹಗೀರಿಗಳಲ್ಲಿರುವ ರೈತರ ದೃಷ್ಟಿಯಿಂದ ಈ ಬಿಲ್ಲು ಅಂಗೀಕಾರವಾಗುವುದೇ ಲೇಸು. ಇದರಿಂದ ಏನು ತೊಂದರೆ ಆಗುತ್ತದೆ ಎಂಬುದನ್ನು ಸರ್ಕಾರ ಪರೀಕ್ಷಿಸುವುದು ಉತ್ತಮ. ಸುಮ್ಮನೆ ಈ ರೀತಿಯ ಪ್ರಚಾರದಿಂದ ಜನರಿಗೆ ಉಪಕಾರವಾದಂತಾಗುವುದಿಲ್ಲ. ಶ್ರೀಮಾನ್ ಗೋಪಾಲಗೌಡರು ಹೇಳಿದಂತೆ ಸಭೆಯವರು ಈ ಅಧಿವೇಶನದಲ್ಲಯೇ ಈ ಮನೂದೆಯನ್ನು ಅಂಗೀಕರಿಸಿದರೆ ಯಾವ ಅನಾಹುತವೂ ಆಗುವುದಿಲ್ಲ. ಆದುದರಿಂದ ಈ Religious Inams Abolition Billಗೂ ಧರ್ಮ ಸಂಸ್ಥೆಗೂ ಸಂಬಂಧ ಕಲ್ಪಿಸಿಕೊಂಡು ಅದರ ಸೋಗಿನಲ್ಲಿ ಇದಕ್ಕೆ ಅಂಗೀಕಾರ ಕೊಡಬಾರದೆಂದು ಹೇಳುವುದು ಸರಿಯಲ್ಲ. ಧರ್ಮ, ಸಂಸ್ಕೃತಿ—ಇವೆಲ್ಲವೂ ಪ್ರತಿಯೊಬ್ಬ ಮಾನವನ ಅಜನ್ಮಸಿದ್ಧ ಹಕ್ಕು. ಆದುದರಿಂದ ಈಗಿನ ಕಾಲಕ್ಕೆ ತಕ್ಕಹಾಗೆ ನಾವು ನಡೆದುಕೊಂಡು ಅತಿ ಜಾಗ್ರತೆಯಾಗಿ ಇದನ್ನು ಕಾನೂನು ಕಡತಕ್ಕೇರಿಸುವುದು ಒಳ್ಳೆಯದೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಬೋರಣ್ಣ ಗೌಡ (ಬೇಲೂರು).—ಸ್ವಾಮಿ, ಈ ಬಿಲ್ಲಿನ ವಿಚಾರದಲ್ಲಿ ಅನೇಕ ಮಾನ್ಯ ಮಿತ್ರರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಈ ಮನೂದೆಯಿಂದ ಧರ್ಮ ಸಂಸ್ಥೆಯ ಕೆಲಸ ಕಾರ್ಯಗಳಿಗೆ ಧಕ್ಕೆ ಇದೆ, ಇದನ್ನು ಈಗ ಅಂಗೀಕರಿಸುವುದು ಸಕಾಲವಲ್ಲ, ಇನ್ನೂ ಸ್ವಲ್ಪ ಕಾಲಾವಕಾಶ ಬೇಕು, ಈ ಬಗ್ಗೆ ಜನಾಭಿಪ್ರಾಯವನ್ನು ಕ್ರೋಡೀಕರಿಸಬೇಕೆಂದು ಕೆಲವರು ಹೇಳಿದರು. ಆದರೆ ಹೀಗೆ ಹೇಳಿದವರು ಇದರಿಂದ ಏನು ಧಕ್ಕೆ ಬರುತ್ತದೆ, ಇದರಲ್ಲಿ

ತೊಂದರೆ ಅನಾನುಕೂಲ ಏನು ಎಂಬುದನ್ನು ತಿಳಿಸಲಲ್ಲ. ನುಮ್ಮನೆ ಇದರ ಬಗ್ಗೆ ಜನಾಭಿಪ್ರಾಯವನ್ನು ಕ್ರೋಡೀಕರಿಸಿ ಎಂದು ಹೇಳುವ ಬದಲು, ಈಗ ಸಭೆಯ ಮುಂದೆ ಇರುವ ಈ ಮಸೂದೆಯಿಂದ ತೊಂದರೆ ಏನಿದೆ ಎಂಬುದನ್ನು ತಿಳಿಸುವುದುತ್ತಮ. ಇವೊತ್ತು ಜೋಡಿ, ಇನಾಂ ಗ್ರಾಮಗಳ ರದ್ದಿಯಾತಿಯಿಂದ ಜನರಿಗೆ—ರೈತಾಪಿ ಜನರಿಗೆ–ಬಹಳ ಅನುಕೂಲವಾಗುತ್ತದೆಂಬ ಮನೋಭಾವನೆ ಬೆಳೆದು ಬಂದಿರುವಾಗ, ಶೃಂಗೇರಿ ಜಹಗೀರಿಗೆ—ಈ ಧರ್ಮ ಸಂಸ್ಥೆಗೆ ಸಂಬಂಧಪಟ್ಟ ಈ ಮಸೂದೆಯ ವಿಚಾರದಲ್ಲಿ ಏಕೆ ಅಡ್ಡಿ ಆತಂಕವನ್ನು ತಂದೊಡ್ಡುತ್ತಿದ್ದಾರೋ ಅರ್ಥವಾಗುವುದಿಲ್ಲ. ನಾನು ಈ ಶೃಂಗೇರಿ ಜಹಗೀರಿಯ ಪಕ್ಕದಲ್ಲಯೇ ಇರತಕ್ಕವನು. ಆದುದರಿಂದ ನನಗೆ ಇದರ ವಿಚಾರ ಸ್ವಲ್ಪಮಟ್ಟಿಗೆ ಗೊತ್ತು. ಅಲ್ಲಿನ ರೈತಾಪಿ ಜನರು ಬಹಳ ಕಷ್ಟದಿಂದ ಜೀವನ ಮಾಡುತ್ತಿದ್ದಾರೆ. ಅವರಿಂದ ಆ ಜಹಗೀರಿಗೆ ಸಂಬಂಧಿಸಿದವರು ವಿಪರೀತ ದುಬಾರಿ ದರದ ಕಂದಾಯ ವಸೂಲು ಮಾಡುತ್ತಿದ್ದಾರೆ. ಸರ್ಕಾರದವರು ಅಲ್ಲಿನ ಆಡಳಿತವನ್ನು ತಾವೇ ವಹಿಸಿಕೊಳ್ಳುವವರೆಗೂ ಅಲ್ಲಿನ ರೈತರಿಗೆ ಉಳಿಗಾಲವಿಲ್ಲ.

2 P.M.

ಅಂಥ ಜನರು ಬೇಕಾದಷ್ಟು ಆಸ್ತಿವಂತರಾಗಿದ್ದಾರೆ, ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಿರತಕ್ಕವರಾಗಿದ್ದಾರೆ. ಅವರ ಹೆಸರುಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಬೊಂಬಾಯಿನ ಕಡೆಯವರು ಅನೇಕರಿದ್ದಾರೆ. ಅವರು ಏನು ಮಾಡುತ್ತಾರೆ? ಈ ಒಂದು ಧರ್ಮ ಸಂಸ್ಥೆಗೆ ಸೇರಿದ ಜಮೀನನ್ನು ಸರ್ಕಾರದವರು ತೆಗೆದುಕೊಂಡು ಹಂಚಿಕೆ ಮಾಡಿಬಿಟ್ಟರೆ ನಮಗೆ ಕಡಮೆ ಆಗಿ ಹೋಗುತ್ತದೆ ಎಂದು ಹೇಳಿ ಈ ಕ್ರಮವನ್ನು ವಿರೋಧಿಸಲು ಸಾವಿರಾರು ರೂಪಾಯಿ ಪ್ರಚಾರಕ್ಕಾಗಿ ಖರ್ಚುಮಾಡುತ್ತಿದ್ದಾರೆ ಎಂದು ನನಗೆ ಖಂಡಿತ ಗೊತ್ತಾಗಿದೆ. ಈ ರೀತಿ ಆಗುತ್ತಿರುವುದನ್ನು ಎಂದಾದರೂ ತಡೆಗಟ್ಟಬೇಕು, ಇಲ್ಲದೇ ಇದ್ದರೆ ಇದರಿಂದ ದೇಶಕ್ಕೆ ಶಾಂತಿ ಉಂಟಾಗುವುದಿಲ್ಲ. ಅವರು ಯಾರೇ ಆಗಲಿ, ಅವರನ್ನು ನಮ್ಮ ರಾಜ್ಯ ಬಿಟ್ಟು ಹೋಗಿ ಎಂದು ಹೇಳುತ್ತಿಲ್ಲ; ದೊಡ್ಡವರು, ಸಾವುಕಾರರಾಗಿರತಕ್ಕವರು ತಮ್ಮಲ್ಲಿರತಕ್ಕ ಹಣವನ್ನು ಬಡವರಿಗೆ ದಾನಮಾಡಿ ಎಂದು ಹೇಳುತ್ತಿಲ್ಲ. ಆದರೆ ತಾವು ಎಲ್ಲಿದ್ದಾರೋ ಅದು ತಮ್ಮದೇ ರಾಜ್ಯ, ಅಲ್ಲಿಗೆ ಯಾರೂ ಬರಕೂಡದು ಎಂದು ಹೇಳತಕ್ಕ ಈ ಪಾಳೆಗಾರರನ್ನು ಧರ್ಮ ಸಂಸ್ಥೆಯ ಹೆಸರಿನಲ್ಲಿ ಉಳಿಸಿದರೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ. ಅದಕ್ಕೆ ಅವಕಾಶ ಕೊಡಬಾರದು. ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವ ಅವಶ್ಯಕತೆ ಏನೂ ಇಲ್ಲ. ಹಿಂದೆ ಒಂದು ಮಸೂದೆಯನ್ನು ಮಾಡಿದ್ದೇವೆ. ಇದು ಅದಕ್ಕಿಂತ ಹೆಚ್ಚಿನ ದೇನೂ ಅಲ್ಲ. ಇದರಲ್ಲಿರತಕ್ಕ ಅಂಶಗಳೆಲ್ಲವೂ ಒಪ್ಪುತಕ್ಕವೇ ಆಗಿವೆ. ಇದು ಬಹಳ ಸುಲಭವಾದದ್ದು, ನುಮ್ಮನೆ ಅರ್ಥವಿಲ್ಲದೆ ಸೆಲೆಕ್ಟ್ ಕಮಿಟಿಗೆ ಕಳುಹಿಸುವುದಾಗಿದೆ. ಅಂಥ ಪ್ರಮೇಯವೇ ಇರಲಲ್ಲ. ಏನೇ ಆಗಲಿ ಈ ಅಧಿವೇಶನದಲ್ಲೇ ಈ ಮಸೂದೆಯನ್ನು ಅಂಗೀಕಾರ ಮಾಡಿ ರೈತರಿಗೆ ಇರತಕ್ಕ ಕಿರುಕುಳ ತಪ್ಪಿಸಿ, ಅವರಿಗೆ ಸೌಲಭ್ಯಗಳನ್ನೊದಗಿಸಿಕೊಡಬೇಕೆಂದು ನಲಹೆಮಾಡುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬನವನಗುಡಿ).—ಸ್ವಾಮಿ, ಅನೇಕ ಮಾನ್ಯ ಸದಸ್ಯರು ಈ ಮಸೂದೆಯ ಮೇಲೆ ಭಾಷಣ ಮಾಡಿದ್ದಾರೆ. ಇದರಲ್ಲಿ ನಮಗೆ ಆಶ್ಚರ್ಯವೇನೂ ಆಗುವುದಿಲ್ಲ. ಇದು ಒಳ್ಳೆಯ ಶಾಸನವೇ ಆಗಿದೆ. ಏಕೆಂದರೆ ಧರ್ಮಕ್ಕೂ ಈ ಮಸೂದೆಗೂ ಯಾವ ಸಂಬಂಧವೂ ಇಲ್ಲ. ಸರ್ಕಾರದ ಉದ್ದೇಶವೂ, ಈ ಸಭೆಯ ಉದ್ದೇಶವೂ ಒಂದೇ ಆಗಿದೆ. ಈಗ ಇರತಕ್ಕಂಥ ಧರ್ಮವನ್ನು ಕಾಪಾಡಿಕೊಂಡು ಬರುವ ಉದ್ದೇಶವನ್ನು ಈ ಮಸೂದೆಯಲ್ಲಿ ಸೂಚಿಸಿದ್ದಾರೆ. ಸರ್ಕಾರದವರೇ ಆಗಲಿ, ಈ ಸಭೆಯ ಮಾನ್ಯ ಸದಸ್ಯರೇ ಆಗಲಿ ಯಾವ ಒಂದು ಮತ ಅಥವಾ ಆಚಾರವನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಾವು ಈ ಮಸೂದೆಯನ್ನು ನೋಡಬಾರದು ಎಂಬುದಾಗಿ ನಾನು ವಿನಯವಾಗಿ ತಿಳಿಸುತ್ತೇನೆ. ನಾವು ಈ ಮಸೂದೆಯನ್ನು ಆ ದೃಷ್ಟಿಯಿಂದ ನೋಡುತ್ತಾ ಇದ್ದೇನೆ. ನಾನು ನೋಡುತ್ತಾ ಇರತಕ್ಕ ದೃಷ್ಟಿಯಲ್ಲಿ ಸರ್ಕಾರದವರು ಯಾವ ಒಂದು ಉದ್ದೇಶವನ್ನು ಹೊಂದಿದ್ದಾರೆ ಎಂದರೆ ಇದುವರೆಗೂ ನಡೆಯುತ್ತಾ ಇರತಕ್ಕ ಒಂದು ದಾನ, ಧರ್ಮಗಳು ಸಾಂಗೋಪಾಂಗವಾಗಿ, ವಿಶೇಷವಾಗಿ ನಡೆಯಬೇಕು ಎಂಬ ಒಂದು ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಅದರಂತೆಯೇ ಆ ಪ್ರದೇಶಗಳಲ್ಲರತಕ್ಕ ರೈತರ ಹಿತವನ್ನೂ ದೃಷ್ಟಿಯಲ್ಲಿಟ್ಟುಕೊಂಡಿದ್ದಾರೆ. ಇವೆರಡನ್ನೂ ಹೊಂದಿಸಿಕೊಂಡು ಹೋಗುವುದಕ್ಕೆ ಈ ಮಸೂದೆಯನ್ನು ತಂದಿರತಕ್ಕದ್ದು ಸ್ಪಷ್ಟವಾಗಿದೆ. ಆದರೆ ನಾವು ಈ ನಂದರ್ಭದಲ್ಲಿ ದೊಡ್ಡ ದೊಡ್ಡ ವಿಚಾರಗಳನ್ನು, ಕವಿಗಳು ಹೇಳಿರತಕ್ಕ ಮಾತುಗಳನ್ನು, ಮತ್ತು ಯಾರೋ ಕೆಲವರು ಬರೆದಿರತಕ್ಕ ಶ್ಲೋಕಗಳನ್ನು ಮನಸ್ಸಿನಲ್ಲಟ್ಟುಕೊಂಡು ನಮ್ಮ ಮನಸ್ಸನ್ನು ಕೆಡಿಸಿಕೊಳ್ಳಬಾರದು. ನಾವು ಈ ನಮಸ್ಯೆಯನ್ನು ನಿಷ್ಪಕ್ಷಪಾತವಾಗಿ, ವಿಜ್ಞಾನ ರೀತಿಯಲ್ಲಿ ಪರ್ಯಾಲೋಚನೆ ಬೇಕೆಂದು ಹೇಳುತ್ತೇನೆ. ಯಾವುದೋ ಒಂದು ಹುಳು ಆಗುತ್ತಾರೆ ಎಂಬ ವಿಷಯ ಹೇಳಿದರು; ಇದಕ್ಕೆಲ್ಲಾ ಈ ಮಾನ್ಯ ಸಭೆಯ ಸದಸ್ಯರು ಎಷ್ಟು ಬೆಲೆ ಕೊಡಬೇಕೋ ಅಷ್ಟೇ ಬೆಲೆ ಕೊಡಬೇಕೆಂದು ಹೇಳುತ್ತೇನೆ. ಯಾರು ಏನು ಆಗಬೇಕೆಂದರೂ ಆಗುವುದಿಲ್ಲ. ಆ ವಿಷಯಗಳನ್ನೆಲ್ಲಾ ಚರ್ಚಿಸಬೇಕಾದರೆ ಬೇರೆ ಒಂದು ವೇದಿಕೆ ಇದೆ. ಅದೆಲ್ಲಾ ಇಲ್ಲಿ ಬೇಡ; ನಾವು ಇಲ್ಲಿ ಒಂದು ಕಾನೂನನ್ನು ಉದ್ದೇಶಿಸಿ ಮಾತನಾಡಬೇಕಾಗಿದೆ. ಈ ಕಾನೂನಿನ ಮುಖ್ಯ ಉದ್ದೇಶ ಏನು? ಇದನ್ನು ಇನಾಂಗಳನ್ನು ರದ್ದುಮಾಡತಕ್ಕ ಒಂದು ಉದ್ದೇಶದಿಂದ ತಂದಿದೆ. ಈ ಇನಾಂತಿಗಳು ಎರಡು ರೀತಿಯಲ್ಲಿ ವಿಂಗಡಿಸಲ್ಪಟ್ಟಿವೆ. Personal and Miscellaneous Inams ಎಂಬುದನ್ನು ಈಗಾಗಲೇ ಅನೇಕ ದಿವಸಗಳು ಚರ್ಚೆಯಾದಮೇಲೆ ಈ ಸಭೆಯಲ್ಲಿ ಅಂಗೀಕರಿಸಿದ್ದೇವೆ. ಈಗ ಬಂದಿರುವುದು Religious and Charitable Inams Abolition Bill. ಎಂದರೆ ಧರ್ಮದ ಒಂದು ಉದ್ದೇಶವನ್ನಿಟ್ಟುಕೊಂಡಿರತಕ್ಕ ಮತ್ತು ದಾನದ ಉದ್ದೇಶವನ್ನಿಟ್ಟುಕೊಂಡಿರತಕ್ಕ ಕೆಲವು ಇನಾಂಗಳು ಇವೆ, ಆ ಇನಾಂಗಳ ವಿಷಯದಲ್ಲಿ ನಾವು Personal and Miscellaneous Inamsಗೆ ಸಂಬಂಧಪಟ್ಟಂತೆ ಯಾವ ರೀತಿಯಾಗಿ ಆಲೋಚನೆ ಮಾಡಿದೆವೋ ಅದೇ ರೀತಿಯಾಗಿ ಆಲೋಚನೆ ಮಾಡಬೇಕೇ ಅಥವಾ ಸ್ವಲ್ಪ ಬೇರೆ ದಾರಿಯಲ್ಲಿ ಹೋಗಬೇಕೇ ಎಂಬುದನ್ನು ನಾವು ಆಲೋಚನೆ ಮಾಡಬೇಕು. ಪರ್ಸನಲ್ ಇನಾಂಗಳು ಆಯಾ ಇನಾಂದಾರರ ಸ್ವಂತ ಇನಾಂಗಳಾಗಿದ್ದು ಅದರಿಂದ ಬರತಕ್ಕ ರಾಭವನ್ನು ಅವರು, ಅವರ ಮಕ್ಕಳು, ಮೊಮ್ಮಕ್ಕಳು, ನತತವಾಗಿ ಅನುಭವಿಸಿಕೊಂಡು ಬಂದಿದ್ದಾರೆ. ಆದರೆ ಈ ರಿಲಿಜಿಯಸ್ ಮತ್ತು ಚಾರಿಟಬಲ್ ಇನಾಂಗಳ ಉದ್ದೇಶ ಆ ರೀತಿ ಆದದ್ದಲ್ಲ. ಒಂದು ಮತ

(ಶ್ರೀ ಪಿ. ಆರ್. ರಾಮಯ್ಯ.)

ಆಗಲಿ, ಅಥವಾ ಇನ್ನಾವುದಾದರೂ ಧರ್ಮನಂಸ್ಥೆ ಆಗಲಿ ಅದಕ್ಕೆ ಯಾವುದಾದರೂ ಇನಾಂ ಜಪ್ತಿಯಾಗಿದ್ದರೆ, ಅದರ ಉದ್ದೇಶ ಯಾವುದು ಇದೆಯೋ, ಧರ್ಮಕಾರ್ಯ ನಡೆಸುವುದು, ಮುಂಜಿ ಮಾಡಿಸುವುದು, ಮದುವೆ ಮಾಡಿಸುವುದು ಈ ರೀತಿಯಾದ ಸಮಾಜಸೇವೆಯನ್ನು ಹಿಂದಿನ ಕಾಲದಲ್ಲಿ ಯಾವುದು ಧರ್ಮಕಾರ್ಯ ಎಂದು ಪರಿಗಣಿಸಿದ್ದರೋ ಆ ಕಾರ್ಯಗಳನ್ನು ಸಾಧಿಸುವ ದೃಷ್ಟಿಯಿಂದ ಅವರು ಈ ಇನಾಂತಿಗಳನ್ನು ಅನುಭವಿಸಿಕೊಂಡು ಬರುತ್ತಾ ಇದ್ದಾರೆ. ಈ ಇನಾಂಗಳನ್ನು ನಡೆಸತಕ್ಕವರು ಎಂದರೆ ಧರ್ಮದರ್ಶಿಗಳು ಅಥವಾ ಟ್ರಸ್ಟೀಸ್ ಅವರ ವಿಷಯದಲ್ಲಿ, ಸ್ವಂತಕ್ಕೆ ಇನಾಂಗಳನ್ನು ಹೊಂದಿದವರ ವಿಷಯದಲ್ಲಿ ಯಾವ ಭಾವನೆ ಇಟ್ಟುಕೊಂಡಿದ್ದೇವೆಯೋ ಅದೇ ರೀತಿಯಾದ ಭಾವನೆ ಇಟ್ಟುಕೊಳ್ಳಬೇಕಾದ್ದು ಸರಿಯಲ್ಲ ಎಂದು ಸೂಚಿಸಬೇಕಾಗಿದೆ. ಈ ಮಸೂದೆಯಲ್ಲಿ 29 ಕಲಂಗಳು ಇವೆ. ಇದರಲ್ಲಿ ಒಂದನೇ ಕಲಂ (3) ರಲ್ಲಿ ಏನು ಹೇಳಿದ್ದಾರೆ ಎಂದರೆ,

1. (3) It applies to—

(*a*) religious inams including the Sringeri Jahgir; and

(*b*) charitable inams.

ರಿಲಿಜಿಯಸ್ ಇನಾಂ, ಚಾರಿಟಬಲ್ ಇನಾಂ ಎನ್ನುವುದಕ್ಕೆ ವಿವರಣೆ ಕೊಟ್ಟಿದ್ದಾರೆ:

Explanation : 'religious inam', or 'charitable inam' means a grant of village, portion of a village or land entered as 'Devadaya inam' or 'Dharmadaya inam', as the case may be, in the alienation register kept under section 51 of the Land Revenue Code.

ಹೀಗೆ ವಿವರಿಸಿರುವುದರಲ್ಲಿ ದೇವಾದಾಯ ಮತ್ತು ಧರ್ಮಾದಾಯ ಇವುಗಳು ಯಾವುವು ಎಂಬುದಕ್ಕೆ ಲ್ಯಾಂಡ್ ರೆವೆನ್ಯೂ ಕೋಡಿನ 51ನೇ ಸೆಕ್ಷನ್ ಇದರಲ್ಲಿ ರೆಫರ್ ಮಾಡಿದ್ದಾರೆ. 51ನೇ ಸೆಕ್ಷನ್‌ನಲ್ಲಿ ಏನಿದೆ ಎಂದರೆ:—

L.R.C. 51. "A register shall be kept by the Deputy Commissioner in such form as may, from time to time, be prescribed by Government of all kinds of alienations of which has been established or recognised under the provisions of any law for the time being in force; and when it shall be shown to the satisfaction of the Deputy Commissioner that a Sannad *granted* in relation to any such alienated lands has been permanently lost or destroyed, he may subject to the rules and payment of the fees prescribed by the Government under section 232 grant to any person whom he may deem entitled to the same, a certified extract from the said register which shall be endorsed by the Deputy Commissioner to the effect that it has been issued in lieu of the sannad said to have been lost or destroyed, and shall be deemed to be as valid a proof of title as the said sannad."

ಮತ್ತು ರಿಜಿಸ್ಟರ್ಸ್‌ನಲ್ಲಿ ಏನೂ ರಹಸ್ಯ ಇಲ್ಲ. ಯಾರು ಬೇಕಾದರೂ ಈ ರಿಜಿಸ್ಟರ್ಸ್‌ನ್ನು ನೋಡಬಹುದು.

L.R.C. 232. Subject to such rules and the payment of such fees as the Government may from time to time prescribe in this behalf, all maps and survey records, and all village accounts and land registers, shall be open to the inspection of the public at reasonable hours, and certified extracts from such maps, registers and accounts, or certified copies thereof, shall be given to all persons applying for the same.

ಈ ಸನ್ನದು ಮತ್ತು ಇದರ ಉದ್ದೇಶ ಏನು ಎಂಬುದನ್ನು ಸಾರ್ವಜನಿಕರಿಗೆ ಯಾವಾಗ ಬೇಕಾದರೂ ತೋರಿಸಬೇಕು. ಇದರಲ್ಲಿ ಯಾವ ರಹಸ್ಯವೂ ಇಲ್ಲ. ಏಕೆಂದರೆ ಪೂರ್ವದಲ್ಲಿ ದತ್ತಿಮಾಡಿದವರು ಧರ್ಮ, ಆಗಲಿ, ದಾನ ಆಗಲಿ ಅದು ಸರ್ವರಿಗೂ ಗೊತ್ತಾಗುವಂತೆ ಇರಬೇಕೆಂಬ ದೃಷ್ಟಿಯಿಂದ ಈ ರಿಜಿಸ್ಟರ್ಸ್ maintain ಮಾಡುತ್ತಾ ಇದ್ದಾರೆ. ಯಾವ ಮೂಲ ಉದ್ದೇಶಕ್ಕಾಗಿ ಧರ್ಮವನ್ನೂ, ದಾನವನ್ನೂ, ದತ್ತಿಯನ್ನೂ ಮಾಡಿದರೋ ಅದನ್ನು ನಡೆಸಿಕೊಂಡು ಹೋಗತಕ್ಕ ಜವಾಬ್ದಾರಿ ಸರ್ವರಿಗೂ ಇದೆ. ಅದೇ ರೀತಿ ಸರ್ಕಾರಕ್ಕೂ ಇದೆ. ಆದ್ದರಿಂದ ಈ ಮಸೂದೆಯಲ್ಲಿ ಅವರು ಸೂಚಿಸಿರತಕ್ಕ ಲ್ಯಾಂಡ್ ರೆವೆನ್ಯೂ ಕೋಡಿನ ಉದ್ದೇಶ ಏನಿದೆ ಅದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಧರ್ಮವನ್ನಾಗಲಿ, ದತ್ತಿಯನ್ನಾಗಲಿ ನಡೆಸಿಕೊಂಡು ಹೋಗಬೇಕೇ ಹೊರತು ಆಘಾತವಾಗುವ ರೀತಿಯಲ್ಲಿ ಏನನ್ನೂ ಮಾಡಬಾರದು ಎಂಬ ಒಂದು ಗುರಿಯನ್ನು ಮತ್ತು ಘನವಾದ ಉದ್ದೇಶವನ್ನು ನಾವು ಇಟ್ಟುಕೊಳ್ಳಬೇಕು. ಯಾವ ಮೂಲ ಉದ್ದೇಶಗಳಿಗಾಗಿ ಈ ಜಪ್ತಿನುಗಳು ದಾನಮಾಡಲ್ಪಟ್ಟವೋ ಆ ಮೂಲ ಉದ್ದೇಶಗಳು ನಡೆಯುತ್ತಾ ಹೋಗಬೇಕು. ಆ ಉದ್ದೇಶ ಇಟ್ಟುಕೊಂಡೇ ಈ ಮಸೂದೆಯನ್ನು ಸರ್ಕಾರದವರು ತಂದಿದ್ದಾರೆ ಎಂಬುದಾಗಿ ನಾನು ಭಾವಿಸುತ್ತೇನೆ. ಆದ್ದರಿಂದ ಈ ಮಸೂದೆಯಲ್ಲಿ ಈ ಘನವಾದ ಉದ್ದೇಶವನ್ನು ನಡೆಸುವುದಕ್ಕೆ ಸಾಧಕವಾಗುತ್ತದೆಯೇ ಇಲ್ಲವೇ ಎಂಬುದನ್ನು ನಾವು ಈ ಸಂದರ್ಭದಲ್ಲಿ ಕೂಲಂಕಷವಾಗಿ ಆಲೋಚನೆ ಮಾಡಬೇಕು.

"(4) This section and sections 2, 27 and 29 shall come into force at

once and the rest of this Act shall come into force in respect of any inam village, or minor inam in an unalienated village, on such date as the Government may by notification appoint".

ಎಂದರೆ ಏನು? ಈ ಸೆಕ್ಷನ್ (2), (27), (29) ಇವು ಕಾನೂನು ಪಾಸ್ ಆದ ತಕ್ಷಣ ಜಾರಿಗೆ ಬರುತ್ತವೆಯೇ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಈಗ 2, 27 ಮತ್ತು 29ನೆಯ ಸೆಕ್ಷನ್‌ಗಳಲ್ಲಿ ಹೇಳಿರುವುದೇ ನೆಂಬುದನ್ನು ತಿಳಿದುಕೊಳ್ಳಬೇಕು. ಈ ಬಿಲ್ಲಿನ ಎರಡನೆಯ ಸೆಕ್ಷನ್‌ನ 7ನೆಯ ಸಬ್‌ಸೆಕ್ಷನ್‌ನಲ್ಲಿ ಈ ರೀತಿ ಹೇಳಿದ್ದಾರೆ:

"Inam village" means an alienated village whether Sarvamanya or Jodi or a portion of such village;

Explanation: In respect of the Sringeri Jahgir, "Inam village" means the group of inam villages specified in the schedule to the Sringeri Jahgir Inam Settlement Act, 1897;

ಎಕ್ಸ್‌ಪ್ಲನೇಷನ್‌ನಲ್ಲಿ ಶೃಂಗೇರಿ ಜಹಗೀರಿಯನ್ನು ಹೊಸದಾಗಿ ಇನಾಂ ಗ್ರಾಮವೆಂದು ಭಾವಿಸಬೇಕೆಂದು ಹೇಳಿದ್ದಾರೆ. ಇದನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಶೃಂಗೇರಿಗೆ ಕೊಟ್ಟಿರುವ ಗ್ರಾಮಗಳಾಗಲಿ, ದತ್ತಿಯಾಗಲಿ ಅದನ್ನು ಇನಾಂ ಎಂದು ಭಾವಿಸಬೇಕೆಂದು ಈ ಕಾನೂನಿನಲ್ಲಿ ಹೊಸದಾಗಿ ಹೇಳಿದ್ದಾರೆ. ಇದು ನಿಜವಾಗಿಯೂ ಇನಾಂ ಹಾಗೆ, ಅಲ್ಲವೆ ಎಂಬುದು ಸಂದೇಹಕರವಾದ ಅಂಶ; ಆದರೆ ಬಿಲ್ಲಿನಲ್ಲಿ ಮಾತ್ರ,

"In respect of the Sringeri Jahgir, 'Inam village' means the group of inam villages specified in the Schedule to the Sringeri Jahgir Inam Settlement Act, 1897."

ಎಂದು ಹೇಳಿರುವುದರಿಂದ ಇದು ಸ್ವಲ್ಪ ಆಲೋಚಿಸಬೇಕಾದ ವಿಷಯ. 27ನೆಯ ಸೆಕ್ಷನ್‌ನಲ್ಲಿ,

"Government may, subject to the condition of previous publication, make rules to carry out the purposes of this Act."

ಎನ್ನುವುದರಲ್ಲಿ ರೂಲ್ ಮೇಕಿಂಗ್ ಪವರ್ ಇದೆ; ತಕ್ಷಣ ಜಾರಿಗೆ ತರಬೇಕೆಂದು ಹೇಳಿದ್ದಾರೆ. 29ನೆಯ ಸೆಕ್ಷನ್‌ನಲ್ಲಿ ಈ ರೀತಿಯಿದೆ,

"If any difficulty arises in giving effect to the provisions of this Act, the Government may, as occasion may require, do anything which appears to them necessary for the purpose of removing the difficulty."

ಇದರಲ್ಲಿ anything ಎಂದು ಹೇಳಿರುವುದನ್ನು ಸ್ವಲ್ಪ ಯೋಚನೆ ಮಾಡಬೇಕು.

They may do anything; they may do extra-legal things. I want this House to consider my difficulty about this.

ಎರಡನೆಯ ಅಧ್ಯಾಯದಲ್ಲಿ "Consequences of the vesting of an inam in the State" ಎಂದು ಎಲ್ಲಾ ಸೂಚಿಸಿದ್ದಾರೆ. ಆ ವಿಷಯಕ್ಕೆ ನಾನು ಈಗ ಹೋಗುವುದಿಲ್ಲ. ಮೂರನೆಯ ಅಧ್ಯಾಯದಲ್ಲಿ ಕಾಂಪೆನ್ಸೇಷನ್ ವಿಚಾರ ಹೇಳಿದ್ದಾರೆ. 16ನೆಯ ಸೆಕ್ಷನ್‌ನಲ್ಲಿ ಈ ರೀತಿಯಿದೆ:

"Component parts of basic annual sum of an inam.—(1) The basic annual sum of an inam shall be the aggregate of the sums specified below, less the deduction specified in section 17:

(i) the whole of the average net annual income derived by the inamdar during a period of five years immediately preceding the date of vesting from lands in respect of which any person is entitled to be registered under sections 4, 5 and 6; Provided that:

(a) the income from sandalwood or any other reserved forest produce shall not be included in the annual income from forests unless the right thereto was expressly conferred on the inamdar by a competent authority;

(b) the income from royalty on minerals or from mining leases shall not be included in the annual income unless the right to such minerals or mines was expressly conferred on the inamdar by a competent authority and such right was recognised under section 38 of the Land Revenue Code;

(c) the income from ferries shall not be included in the annual income unless the right to such ferries was expressly granted to the inamdar by a competent authority".

ಈ ರೀತಿಯಾಗಿ ಹಕ್ಕನ್ನು ತೆಗೆದುಕೊಳ್ಳುವುದರಿಂದ ಶೃಂಗೇರಿಯಂಥ ಒಂದು ಜಹಗೀರಿಗಾಗಲಿ ಅಥವಾ ಇನ್ನಾವುದಾದರೂ ಒಂದು ಮಠ ಸಂಬಂಧವಾದ ಮತ್ತು ಧರ್ಮಾರ್ಥವಾದ ಇನಾಂ ಇರುವುದಕ್ಕಾಗಲಿ ಅವರ ಆದಾಯಕ್ಕೆ ಕುಂದುಕವಾಗುವುದಿಲ್ಲವೆ ಎಂಬುದನ್ನು ಸ್ವಲ್ಪ ಆಲೋಚಿಸಬೇಕು. 18ನೆಯ ಸೆಕ್ಷನ್‌ನಲ್ಲಿ ಈ ರೀತಿಯಿದೆ:

(ಶ್ರೀ ಪಿ. ಆರ್. ರಾಮಯ್ಯ.)

"Payment of compensation—(1) The Government shall pay to the inamdar every year so long as the institution exists, the basic annual sum as a tasdik allowance;

(2) The sum payable under sub-section (1) may be paid in such form and manner, and at such time or times, and in one or more instalments, as may be prescribed."

ಇದರಲ್ಲಿ 'so long as the institution exists' ಎಂದು ಹೇಳಿರುವುದರಿಂದ ಸಂದೇಹಕ್ಕೆ ಅವಕಾಶ ವಾಗಿದೆ. ಆ ಇನ್‌ಸ್ಟಿಟ್ಯೂಷನ್ ನಡೆಯುವ ವಿಷಯದಲ್ಲಿ ಸರ್ಕಾರದವರು ಯಾವ ಜಪಾಬ್ದಾರಿಯನ್ನೂ ವಹಿಸ ಬೇಕಾಗಿಲ್ಲ, ಅದು ತನ್ನಷ್ಟಕ್ಕೆ ತಾನೆ ಲಯವಾಗಿ ಬಿಟ್ಟರೆ ಗಮನಿಸಬೇಕಾಗಿಲ್ಲ ಎಂದು ಹೇಳುವ ಹಾಗಿದೆ. ಆದರೆ ರೆವೆನ್ಯೂ ಕೋಡಿನಲ್ಲಿ ಹೇಳುವ ಹಾಗೆ ಮೂಲೋದ್ದೇಶ, ಧರ್ಮ, ದಾನ ನಡೆಸುವುದಕ್ಕೆ ಏನು ಏರ್ಪಾಡು ಮಾಡಬೇಕೋ ಆ ರೀತಿ ಮಾಡುವುದು ಸರ್ಕಾರಕ್ಕೆ ಸೇರಿದ್ದಾಗಿದೆ. ಆದ್ದರಿಂದ 'so long as the institution exists' ಎಂದು ಹೇಳುವುದು ಸಂದೇಹಕ್ಕೆ ಅವಕಾಶಕೊಟ್ಟಿದೆ. ಆದ್ದರಿಂದ ಇದನ್ನು ಸ್ವಲ್ಪ ಯೋಚನೆಮಾಡಬೇಕು.

ಆ ಮೇಲೆ ಸಬ್ ಸೆಕ್ಷನ್ ಎರಡರಲ್ಲಿ ಈ ರೀತಿಯಾಗಿ ಹೇಳಿದೆ :—

"The sum payable under sub-section (1) may be paid in such form and manner, and at such time or times, and in one or more instalments, as may be prescribed."

ಪರಿಹಾರವನ್ನು ಕಂತುಗಳಲ್ಲಿ ಕೊಡುವುದರಿಂದ ಧರ್ಮ ಸಂಸ್ಥೆಗಳನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆಯೆ ಎಂದು ಸ್ವಲ್ಪ ಯೋಚನೆಮಾಡಿ ನೋಡಬೇಕು. ಏಕೆಂದರೆ ಕಡೆಯಲ್ಲಿ ಅನ್ಯಯಿಟಿ ಕೊಡಬೇಕೆಂದು ಹೇಳಿದ್ದಾರೆ. ಇದು ಅದಕ್ಕೆ ಸ್ವಲ್ಪ ವಿರುದ್ಧವಿರುವ ಹಾಗಿದೆ. 20ನೆಯ ಸೆಕ್ಷನ್‌ನಲ್ಲಿ—

"The Deputy Commissioner shall determine in accordance with the foregoing provisions the basic annual sum in respect of the inam."

